ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS Since 1982

# DEEDS ಸಂವಾದ

ಸಮತೆಯ ಸಮಾಜದೆಡೆಗೆ

ಸಂವಾದ 6

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

2023 ವರ್ಷ ನಿಮ್ಮ ಜೀವನಕ್ಕೆ ಸಂತೋಷ, ಹೊಸ ಗುರಿಗಳು, ಹೊಸ ಸಾಧನೆಗಳು ಮತ್ತು ಅನೇಕ ಹೊಸ ಸ್ಫೂರ್ತಿಗಳನ್ನು ತರಲಿ ಎಂದು ಹಾರೈಸುತ್ತೇವೆ. ಕಳೆದ ಎರಡು ವರ್ಷಗಳಲ್ಲಿ ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಆಸಕ್ತ 120 ಮಹಿಳೆಯರು ಮತ್ತು ಪುರುಷರು ಮೂರು ಹಂತಗಳಲ್ಲಿ ಲಿಂಗತ್ವ, ಮಹಿಳಾ ಕಾನೂನು ಮತ್ತು ಮಹಿಳಾ ಪ್ರಕರಣ ನಿರ್ವಹಣೆ ವಿಷಯಗಳಲ್ಲಿ ತರಬೇತಿ ಪಡೆದು ಕಾನೂನು ಸುಗಮಕಾರರಾಗಿದ್ದಾರೆ. ಇವರು ಪ್ರತಿ ಹಂತದಲ್ಲಿ ವಾಸವಿರುವ ಹಳ್ಳಿಗಳಲ್ಲಿ ತಳಮಟ್ಟದ ಸುಮಾರು 15,000 ಮಹಿಳೆಯರು ಮತ್ತು ಪುರುಷರಿಗೆ ಅವರು ಪಡೆದ ತರಬೇತಿಯ ಮಾಹಿತಿಯನ್ನು ನೀಡಿರುತ್ತಾರೆ. ಸುಗಮಕಾರರು ಮಾಹಿತಿ ಕಾರ್ಯಕ್ರಮದಲ್ಲಿ ಹಾಜರಿದ್ದ ಭಾಗಾರ್ಥಿಗಳಿಗೆ ಕರಪತ್ರವನ್ನು ಹಂಚಿದ್ದು ಭಾಗಾರ್ಥಿಗಳು ಕಾನೂನಿನ ಕರಪತ್ರ, ಇಲಾಖಾ ಸಹಾಯವಾಣಿಗಳನ್ನು ನೆರೆಮನೆ, ಸಂಬಂಧಿಕರಿಗೆ ಹಂಚುವುದರ ಮೂಲಕ ಕಾನೂನು ಎಲ್ಲರ ಮನೆ ಬಾಗಿಲಿಗೆ ತಲುಪುವಲ್ಲಿ ಕೈ ಜೋಡಿಸಿದ್ದಾರೆ.




ನಾವು ಕಾರ್ಯನಿರ್ವಹಿಸುವ ಏಳು ಜಿಲ್ಲೆಗಳಾದ ಉತ್ತರಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಕಾನೂನು ಸೇವೆಗಳ ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳಿಂದ ಬೇಡಿಕೆ ಬಂದಿದೆ. ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯದಿಂದ ಹಳ್ಳಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನೆರವಿನಿಂದ ಸಹಭಾಗಿತ್ವದಿಂದ ಪ್ರತಿ ತಿಂಗಳು ಮಹಿಳಾ ಕಾನೂನಿನ ಅರಿವಿನ ಜಾಥಾ, ಮನೆ ಮನೆ ಮಾಹಿತಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸುಗಮಕಾರರ ಸಾಧನೆಗಳನ್ನು ಗುರುತಿಸಿ ಆಯಾ ಜಿಲ್ಲೆಗಳ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಸುಮಾರು 78 ಅರೆಕಾಲಿಕ ಸ್ವಯಂ ಸೇವಕರಾಗಿ ನೇಮಕಗೊಂಡಿದ್ದಾರೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಗೌರವಾನ್ವಿತ ಶ್ರೀ ಈಶ್ವರ್ ಭಟ್ ಈ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಒಂದು ವರ್ಷದ ಕೋರ್ಸನ್ನು ವಿಶ್ವವಿದ್ಯಾನಿಲಯದಲ್ಲಿ ಆರಂಭಿಸಿರುತ್ತಾರೆ.

ಡೀಡ್ಸ್ ಸಂಸ್ಥೆಯು ತಳಮಟ್ಟದಲ್ಲಿ ಲಿಂಗತ್ವ, ಕಾನೂನಿನ ಮಾಹಿತಿ ಕಾರ್ಯಕ್ರಮ ನಡೆಸುವ ಮೊದಲು ನಾಲ್ಕು ಜಿಲ್ಲೆಗಳಲ್ಲಿ ಮೂಲ ಮಾಹಿತಿ ಸಂಗ್ರಹಿಸಿದ್ದು ಸುಗಮಕಾರರಲ್ಲಿ ಮತ್ತು ತಳಮಟ್ಟದ ಜನರಲ್ಲಿ ಲಿಂಗತ್ವ, ಮಹಿಳಾ ಕಾನೂನಿನ ಮಾಹಿತಿಯ ಕೊರತೆಯನ್ನು ಗಮನಿಸಿದ್ದೇವೆ. ತರಬೇತಿಯ ನಂತರ ತಳಮಟ್ಟದಲ್ಲಿ ಮಾಹಿತಿಯ ಮೌಲ್ಯಮಾಪನದಲ್ಲಿ 90% ಜನರು ತಿಳುವಳಿಕೆಯನ್ನು ಕಾರ್ಯರೂಪಕ್ಕೆ ಇಳಿಸಿದ್ದಾರೆ. ಲಿಂಗತ್ವ ಮಾಹಿತಿ ತಿಳಿದುಕೊಂಡ ನಂತರ ಅವರ ಆಲೋಚನೆಗಳಲ್ಲಿ ಬದಲಾವಣೆ, ಮನೆಗಳಲ್ಲಿ ಹೆಣ್ಣು ಗಂಡು ಮಕ್ಕಳಿಗೆ ಸಮಾನ ಪ್ರೀತಿ, ಆಹಾರ, ಶಿಕ್ಷಣ, ಸಂಪತ್ತು ಮತ್ತು ಮನೆವಾರ್ತೆ ಕೆಲಸಗಳನ್ನು ಸಮಾನವಾಗಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಭಾಗಾರ್ಥಿಗಳ ಮನೆಗಳಲ್ಲಿ ಆದ ಬದಲಾವಣೆಯಿಂದ ಅವರ ನೆರೆಮನೆ ಮತ್ತು ಸಂಬಂಧಿಕರ ಮನೆಗಳಲ್ಲಿ ಮಕ್ಕಳನ್ನು ಸಮಾನವಾಗಿ ಕಾಣುವಂತೆ ಮಾಡಿದ್ದಾರೆ. ಕಾನೂನು ಮಾಹಿತಿ ಪಡೆದ ಮಹಿಳೆಯರು ಅವರ ಮನೆಗಳಲ್ಲಿ, ಸಂಬಂಧಿಕರಲ್ಲಿ, ಪರಿಸರದಲ್ಲಿ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ, ಸಹಾಯವಾಣಿಗೆ ಕರೆಮಾಡಿ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಲು ಮತ್ತು ಮಹಿಳೆಯರಿಗೆ ಧೈರ್ಯ ನೀಡಿ ಸಂಬಂಧಪಟ್ಟ ಇಲಾಖೆಗಳಲ್ಲಿ ದೂರು ನೀಡುತ್ತಿದ್ದಾರೆ. ಇದರ ಪರಿಣಾಮವಾಗಿ ಸುಮಾರು 268 ಪ್ರಕರಣಗಳು ಮಹಿಳಾ ಪೊಲೀಸ್ ಸ್ಟೇಷನ್, ಸಖಿ, ಸಾಂತ್ವನ, ತಾಲೂಕು ಮತ್ತು ಜಿಲ್ಲೆ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ದಾಖಲಾಗಿವೆ. ಇವುಗಳಲ್ಲಿ ಸುಮಾರು 18 ಪ್ರಕರಣಗಳಲ್ಲಿ ನ್ಯಾಯ ದೊರಕಿದೆ ಮತ್ತು 12 ಬಾಲ್ಯವಿವಾಹ ನಿಲ್ಲಿಸಿರುತ್ತಾರೆ. ಕಾನೂನು ಮಾಹಿತಿಯಿಂದ ಹಳ್ಳಿಗಳಲ್ಲಿ ಹಿಂಸೆಯ ಪ್ರಮಾಣ ಬಹಳ ಇಳಿಮುಖವಾಗಿದೆ ಎಂದು ತಳಮಟ್ಟದ ಮಹಿಳೆಯರು ಜಿಲ್ಲೆಗಳಲ್ಲಿ ನಡೆದ ಸಮಾವೇಶದಲ್ಲಿ ತಮ್ಮ ಅನುಭವ ಹಂಚಿಕೊಂಡಿರುತ್ತಾರೆ. ಕಾನೂನು ಅರಿವಿನ ಕಾರ್ಯಕ್ರಮಗಳನ್ನು ಸುಗಮಕಾರರು, ತಳಮಟ್ಟದ ಕಾರ್ಯಕ್ರಮ ಭಾಗಾರ್ಥಿಗಳು, ಸ್ವ-ಸಹಾಯ ಗುಂಪುಗಳು, ಸ್ಥಳೀಯ ಸಂಸ್ಥೆಗಳು ಇಲಾಖೆಗಳು ಮುಂದುವರೆಸಬೇಕು. ಹಿಂಸೆಯಿಂದ ಬಳಲುತ್ತಿರುವವರಿಗೆ ನ್ಯಾಯಿಕ ಸಹಾಯಕ್ಕೆ ಮುಂದಾಗಬೇಕು ಎನ್ನುವುದೇ ಡೀಡ್ಸ್‌ನ ಆಶಯವಾಗಿದೆ.

**ಮರ್ಲಿನ್ ಮಾರ್ಟಿಸ್**

# ಉತ್ತರ ಕನ್ನಡ ಜಿಲ್ಲೆ

## ಪೂರಕ ಕಾನೂನು ಸುಗಮಕಾರರ ತರಬೇತಿ



ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಮೂರು ಹಂತಗಳ ಹೊಸ ಪೂರಕ ಕಾನೂನು ಸುಗಮಕಾರರ ತರಬೇತಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಹಭಾಗಿ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ನಡೆಸಲಾಯಿತು.

ಹೆಣ್ಣು ಗಂಡು ಅಸಮಾನತೆ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ದೌರ್ಜನ್ಯಗಳಂತಹ ಅನಿಷ್ಟಗಳಿಗೆ ಮಹಿಳೆಯರು ಒಳಗಾಗುತ್ತಿದ್ದಾರೆ. ಇದಕ್ಕೆ ಮಾಹಿತಿಯ ಕೊರತೆಯೂ ಕಾರಣವಾಗಿದ್ದು, ಈ ಕಾರಣವಾಗಿಯೂ ಜನರಲ್ಲಿ ಕಾನೂನುಗಳ ಅರಿವನ್ನು ಮೂಡಿಸುವ ಕೆಲಸವನ್ನು ಕಾನೂನು ಸೇವಾ ಪ್ರಾಧಿಕಾರ ನಿರಂತರವಾಗಿ ನಡೆಸುತ್ತಿದೆ. ಜತೆಗೆ ನೊಂದ ಮಹಿಳೆಯರಿಗೆ, ಬಡವರಿಗೆ ಉಚಿತ ಮಾರ್ಗದರ್ಶನ ಮತ್ತು ಪ್ರಕರಣವನ್ನು ನ್ಯಾಯಾಲಯದಲ್ಲಿ ನಡೆಸಲು ಉಚಿತವಾಗಿ ವಕೀಲರನ್ನು ಒದಗಿಸುತ್ತಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಪ್ರಾಧಿಕಾರವನ್ನು ಸಂಪರ್ಕಿಸಿದರೆ ಮಾರ್ಗದರ್ಶನ, ಸಹಾಯವನ್ನು ಮಾಡಲಾಗುತ್ತದೆ ಎಂದು ಉತ್ತರ ಕನ್ನಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರೇಣುಕಾ ಡಿ ರಾಯ್ಕರ್ ಕಾರವಾರದ ಕೆಡಿಡಿಸಿ ಸಭಾಂಗಣದಲ್ಲಿ ನಡೆದ ಮಹಿಳಾ ಪ್ರಕರಣಗಳ ನಿರ್ವಹಣೆ ಬಗೆಗಿನ ತರಬೇತಿಯಲ್ಲಿ ತಿಳಿಸಿದರು. 13 ಮಂದಿ ಸುಗಮಕಾರರು ತರಬೇತಿಯಲ್ಲಿ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸಂತಾನಿ ದಂಡಿನ್, ಪಾನೆಲ್ ವಕೀಲರಾದ ರಾಜೇಶ್ವರಿ ವಿ, ಸಖಿ ಕೇಂದ್ರದ ಮಂಜುಳಾ, ಶ್ವೇತಾ ಭಾಗವಹಿಸಿದ್ದರು.

## ತಳ ಮಟ್ಟದ ಮಾಹಿತಿ ಕಾರ್ಯಕ್ರಮ



ಪ್ರತೀ ಹಂತದಲ್ಲಿ ಪೂರಕ ಕಾನೂನು ತರಬೇತಿ ಪಡೆದ ಸುಗಮಕಾರರು ಅವರ ಪ್ರದೇಶಗಳಲ್ಲಿ ತಳಮಟ್ಟದ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಮೊದಲನೆಯ ಹಂತದ ಲಿಂಗತ್ವದ ಮಾಹಿತಿಯಲ್ಲಿ 27 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿ 670 ಮಹಿಳೆಯರಿಗೆ, ಎರಡನೆಯ ಹಂತದ ಮಹಿಳಾ ಕಾನೂನು ಮಾಹಿತಿಯಲ್ಲಿ 26 ಮಾಹಿತಿ ಕಾರ್ಯಕ್ರಮಗಳ ಮೂಲಕ 634 ಮಹಿಳೆಯರಿಗೆ ಮತ್ತು ಮೂರನೆಯ ಹಂತದ ದಾಖಲೆಗಳ ಮಹತ್ವದ ಮಾಹಿತಿಯನ್ನು 23 ತಳಮಟ್ಟದ ಕಾರ್ಯಕ್ರಮಗಳನ್ನು ಮಾಡಿ 575 ಮಹಿಳೆಯರಿಗೆ ನೀಡಿರುತ್ತಾರೆ. ಈ ಮಾಹಿತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಹತ್ತಿರದ 5 ಮನೆಗಳಿಗೆ ಲಿಂಗತಾರತಮ್ಯದ, ಮಹಿಳಾ ಕಾನೂನುಗಳಾದ ಕೌಟುಂಬಿಕ ದೌರ್ಜನ್ಯ ಮತ್ತು ದಾಖಲೆಯ ಮಹತ್ವ, ಕರಪತ್ರಗಳನ್ನು ಹಂಚಿ ಮನೆಮನೆಗಳಿಗೆ ಮಾಹಿತಿಯನ್ನು ನೀಡಿರುತ್ತಾರೆ.

ಸಮುಚ್ಚಯದ ಕಾರ್ಯಕ್ರಮವಾಗಿ ಪೂರಕ ಕಾನೂನು ಸುಗಮಕಾರರು ಲಿಂಗ ಸಮಾನತೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೋ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು 33 ತಳಮಟ್ಟದ ಮಾಹಿತಿ ಕಾರ್ಯಕ್ರಮ ಮೂಲಕ 925 ಮಹಿಳೆಯರು ಮತ್ತು ಪುರುಷರು ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ.

## ಸಮಾಲೋಚನಾ ಕಾರ್ಯಕ್ರಮ



ಡಿಸೆಂಬರ್ ತಿಂಗಳ 06, 2022ರಂದು ಕೆ.ಡಿ.ಡಿ.ಸಿ ಸಂಸ್ಥೆ ಸಭಾಂಗಣ ಕಾರವಾರದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಾರವಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರವಾರ ಮತ್ತು ಇನ್ನಿತರ ಮಹಿಳೆಯರೊಟ್ಟಿಗೆ ಕೆಲಸ ನಿರ್ವಹಿಸುವ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಿರುವ ನ್ಯಾಯ ವ್ಯವಸ್ಥೆಗಳ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಾದ ಶ್ರೀಮತಿ ರೇಣುಕಾ ಡಿ. ರಾಯ್ಕರ್ ಭಾಗವಹಿಸಿದ್ದರು. ಈ ಸಭೆಯಲ್ಲಿ 25 ಪ್ರತಿನಿಧಿಗಳು ಹಾಜರಿದ್ದರು. ಮಹಿಳಾ ಪೋಲೀಸ್ ಠಾಣೆಯ ಸಿಬ್ಬಂದಿ, ಸಖಿ, ಸಾಂತ್ವನ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು. ಪ್ರತಿನಿಧಿಗಳು ಸಮಸ್ಯೆಗಳ ಬಗ್ಗೆ ಸದಸ್ಯ ಕಾರ್ಯದರ್ಶಿಯವರಲ್ಲಿ ಚರ್ಚಿಸಿದರು.

# ಧಾರವಾಡ ಜಿಲ್ಲೆ

## ಸಮಾವೇಶ ಕಾರ್ಯಕ್ರಮ



ಪೂರಕ ಕಾನೂನು ಸುಗಮಕಾರರ ಮತ್ತು ತಳಮಟ್ಟದ ಕಾರ್ಯಕ್ರಮ ಭಾಗಾರ್ಥಿಗಳ ಸಮಾವೇಶವು ಮಾರ್ಚ್ 7ರಂದು ಡಾನ್‌ಬಾಸ್ಕೋ ಹಾಲ್, ಸುತಗಟ್ಟಿ ಹುಬ್ಬಳ್ಳಿಯಲ್ಲಿ ನಡೆಯಿತು. ಸಮಾವೇಶವನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಗೌರವಾನ್ವಿತ ಶ್ರೀ ಈಶ್ವರ ಭಟ್ ಉದ್ಘಾಟಿಸಿದರು. ಶ್ರೀ ರವೀಂದ್ರ ಡಿ. ಸೀನಿಯರ್ ಸೆಷನ್ ಜಡ್ಜ್ ಮತ್ತು ಅಧ್ಯಕ್ಷರು ತಾಲೂಕು ಕಾನೂನು ಸೇವೆಗಳ ಸಮಿತಿ ಧಾರವಾಡ, ಫಾ। ಜೋಸೆಫ್ ಡಯಾಸ್ ಆಡಳಿತಾಧಿಕಾರಿ, ಡಾನ್‌ಬಾಸ್ಕೋ ಅಕಾಡೆಮಿ ಸುತಗಟ್ಟಿ, ಡೀಡ್ಸ್ ಸಂಸ್ಥೆಯ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು. 20 ಮಂದಿ ಸುಗಮಕಾರರು ಮತ್ತು 76 ಮಂದಿ ತಳಮಟ್ಟದ ಭಾಗಾರ್ಥಿಗಳು ಭಾಗವಹಿಸಿದ್ದರು. ಡೀಡ್ಸ್ ವತಿಯಿಂದ ನಡೆದ ತರಬೇತಿ ಮತ್ತು ಮಾಹಿತಿ ಕಾರ್ಯಕ್ರಮಗಳಿಂದ ತಮಗಾದ ಪ್ರಯೋಜನ ಮತ್ತು ಅವರ ಮನೆಗಳಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ಮಾಡಿದ ಬದಲಾವಣೆ ಹಾಗೂ ಅನುಭವಗಳನ್ನು ಭಾಗಾರ್ಥಿಗಳು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ಪೂರಕ ಕಾನೂನು ಸುಗಮಕಾರರಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಸಂತಾಣಿಯವರು ಕಾರ್ಯಕ್ರಮ ನಿರೂಪಿಸಿದರು, ಪದ್ಮಪ್ರಿಯ ಸ್ವಾಗತಿಸಿದರು, ಕುಸುಮ ಧನ್ಯವಾದವಿತ್ತರು.

## ಸಮುಚ್ಛಯದ ಸಭೆ ಮತ್ತು ತಳ ಮಟ್ಟದ ಮಾಹಿತಿ ಕಾರ್ಯಕ್ರಮ

ಗೂಗಲ್ ಮೀಟ್ ಹಾಗೂ ದೈಹಿಕ ಸಭೆಗಳೂ ಸೇರಿ ನಡೆದ ಏಳು ಸಭೆಗಳಲ್ಲಿ 11 ಜನ ಸುಗಮಕಾರರು ಭಾಗವಹಿಸಿ ಪೂರಕ ಕಾನೂನು ಸುಗಮಕಾರರ ಮತ್ತು ಭಾಗಾರ್ಥಿಗಳ ಸಮಾವೇಶದ ಕುರಿತು, ಜಿಲ್ಲಾ ಕ್ರಿಯಾ ಯೋಜನೆಗಳ ಮತ್ತು ನಿರ್ವಹಿಸಿದ ಪ್ರಕರಣಗಳು, ತಳಮಟ್ಟದಲ್ಲಿ ನೀಡಿದ ಮಾಹಿತಿ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಜಿಲ್ಲಾ ಸಮುಚ್ಛಯದ ಒಟ್ಟು 15 ಜನ ಪೂರಕ ಕಾನೂನು ಸುಗಮಕಾರರು ಲಿಂಗ–ಸಮಾನತೆ, ಕೌಟುಂಬಿಕ ದೌರ್ಜನ್ಯ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು ಒಟ್ಟು 90 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ 1010 ಮಹಿಳೆಯರು, ಪುರುಷರು ಹಾಗೂ 7450 ಪ್ರೌಢ ಶಾಲಾ ಮಕ್ಕಳಿಗೆ ಮಾಹಿತಿಯನ್ನು ನೀಡಿರುತ್ತಾರೆ.



## ಸಮಾಲೋಚನಾ ಕಾರ್ಯಕ್ರಮ



ಸಪ್ಟೆಂಬರ್ ತಿಂಗಳ 12, 2022ರಂದು ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಹಿಳೆಯರಿಗಿರುವ ನ್ಯಾಯವ್ಯವಸ್ಥೆಗಳ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಉದ್ಘಾಟಕರಾಗಿ ಗೌರವಾನ್ವಿತ ಶ್ರೀಮತಿ ಪುಷ್ಪಲತಾ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಧಾರವಾಡ ಹಾಗೂ ಸೋಮಶೇಖರ್ ಪ್ಯಾನಲ್ ವಕೀಲರು ಭಾಗವಹಿಸಿದ್ದರು. ಕಲಘಟಗಿ, ಧಾರವಾಡ, ಹುಬ್ಬಳ್ಳಿ ತಾಲೂಕಿನಿಂದ ಸಾಂತ್ವನ, ಉಜ್ವಲ, ಸ್ವಾಧಾರ ಸಂಸ್ಥೆಯವರು, ಮಹಿಳಾ ಜಿಲ್ಲಾ ಸಂಯೋಜಕರು "ಸಖಿ" ಒನ್ ಸ್ಟಾಪ್ ಸೆಂಟರ್ ಹಾಗೂ ಡಿ.ಎಲ್.ಎಸ್.ಎ ಪದಾಧಿಕಾರಿಗಳು ಹಾಗೂ ಪೂರಕ ಕಾನೂನು ಸುಗಮಕಾರರು ಸಭೆಯಲ್ಲಿ ಭಾಗವಹಿಸಿದ್ದರು. ಮಹಿಳೆಯರು ಎಲ್ಲಾ ವಿಷಯಗಳಲ್ಲಿ ಸಬಲರು ಹಾಗೂ ಸದೃಢರು. ಮಹಿಳೆಯರ ಮಾನಸಿಕ ಶಕ್ತಿಯು ಪುರುಷರಿಗಿಂತ ಅದೆಷ್ಟೋ ಪಟ್ಟು ಹೆಚ್ಚಾಗಿರುತ್ತದೆ. ಎಲ್ಲರೂ ಮೊದಲು ನಮ್ಮನ್ನು ಮತ್ತು ಕೆಲಸವನ್ನು ಪ್ರೀತಿಸಬೇಕು ಎಂದು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು. ಮಹಿಳೆಯರೊಟ್ಟಿಗೆ ಕೆಲಸ ಮಾಡುವ ನಾವೆಲ್ಲರೂ ಕಾನೂನು ಕ್ರಮಗಳನ್ನು ತಿಳಿದಿರಬೇಕು. ಡೀಡ್ಸ್ ಕಾನೂನು ಸಂಯೋಜಕರಾದ ದೀಪಾರವರು ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಮತ್ತು ಸಂದೇಹದ ವಿಷಯಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಈ ಸಭೆಯಲ್ಲಿ 30 ಜನ ಪ್ರತಿನಿಧಿಗಳು ಮತ್ತು ಸುಗಮಕಾರರು ಭಾಗವಹಿಸಿದರು.

# ಬಳ್ಳಾರಿ ಜಿಲ್ಲೆ

## ಸಮಾವೇಶ ಕಾರ್ಯಕ್ರಮ




ಪೂರಕ ಕಾನೂನು ಸುಗಮಕಾರರ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಭಾಗಾರ್ಥಿಗಳ ಸಮಾವೇಶವು ಜೂನ್ ತಿಂಗಳ 30, 2022ರಂದು ಬಳ್ಳಾರಿಯ ಬಿಡಿಎಎ ಸಭಾಂಗಣದಲ್ಲಿ ಡೀಡ್ಸ್ ಮಂಗಳೂರು, ವಿಮುಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘ ಬಳ್ಳಾರಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ಹುಬ್ಬಳ್ಳಿ, ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಮತ್ತು ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳು ಬಳ್ಳಾರಿ ಸಹಭಾಗಿತ್ವದಲ್ಲಿ ನಡೆಯಿತು.

ಡೀಡ್ಸ್‌ನ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಪ್ರಾಸ್ತಾವಿಕ ಮಾತನಾಡುತ್ತಾ ಪ್ರತಿ ಮನೆಯಲ್ಲಿ ಮಹಿಳೆಯರು ತಾರತಮ್ಯ, ದೌರ್ಜನ್ಯವನ್ನು ಅನುಭವಿಸುತ್ತಿದ್ದಾರೆ. ಹೆಚ್ಚಿನ ಮಹಿಳೆಯರಿಗೆ ಇದು ಹಿಂಸೆ ಅಂತ ಗೊತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ಹಿಂಸೆ, ಬಾಲ್ಯವಿವಾಹ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು ಜಾಸ್ತಿಯಾಗಿವೆ. ಇವು ಅಪರಾಧ ಅನ್ನುವ ಜಾಗೃತಿ ಜನರಲ್ಲಿ ಬೆಳೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಾವು ಬಳ್ಳಾರಿಯಲ್ಲಿ 12 ದಿನಗಳ ಲಿಂಗತ್ವ, ಮಹಿಳಾ ಕಾನೂನುಗಳು, ಮಹಿಳಾ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿ ಪೂರಕ ಕಾನೂನು ತರಬೇತಿಯನ್ನು ನಡೆಸಿದೆವು. ಈ ಪೂರಕ ಕಾನೂನು ಸುಗಮಕಾರರ ಮೂಲಕ ಪ್ರತೀ ಹಂತದಲ್ಲಿ ಹಳ್ಳಿಗಳ 6000ಕ್ಕಿಂತ ಅಧಿಕ ಮಂದಿಗೆ ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಗಿದೆ ಎಂದರು.

ಡೀಡ್ಸ್ ಸಂಸ್ಥೆ ತಳಮಟ್ಟದಲ್ಲಿ ಕಾನೂನಿನ ಅರಿವನ್ನು ಮೂಡಿಸುತ್ತಿರುವುದು ಸಂತಸದ ಸಂಗತಿ. ಕಾನೂನು ಸಮುದ್ರ ಇದ್ದ ಹಾಗೆ. ಮಗುವಿನ ಭ್ರೂಣದ ಹುಟ್ಟಿನಿಂದ ಹಿಡಿದು ವ್ಯಕ್ತಿ ಸಾಯುವವರೆಗೆ ಪ್ರತೀ ವ್ಯಕ್ತಿ ಕಾನೂನನ್ನು ನಿಭಾಯಿಸಬೇಕಾಗುತ್ತದೆ. ಹಿಂಸೆಗೊಳಗಾದ ಮಹಿಳೆಗೆ ಸಂಬಂಧಿಸಿದ ದೌರ್ಜನ್ಯ ತಡೆ ಕಾಯ್ದೆ ಆಕೆಗೆ ಎಲ್ಲಾ ರೀತಿಯ ಪರಿಹಾರವನ್ನು ನೀಡುತ್ತದೆ. ಅದೆಷ್ಟೋ ಕಾನೂನುಗಳಿದ್ದರೂ ದೌರ್ಜನ್ಯ ನಿಂತಿಲ್ಲ. ಇದಕ್ಕೆ ಎಲ್ಲರೂ ಕಾನೂನನ್ನು ತಿಳಿದುಕೊಳ್ಳುತ್ತಾ, ನಮ್ಮ ಸುತ್ತಮುತ್ತಲಿನ ಜನರಿಗೆ ಮಾಹಿತಿ ನೀಡುವ ಮೂಲಕ ಹಿಂಸೆ ನಿಲ್ಲಿಸಬಹುದು. ಈ ಮೂಲಕ ನಮಗಾಗುವ ಶೋಷಣೆಗಳನ್ನು ತಡೆಯಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಆಗಿರುವ ಸತೀಶ್ ಜೆ ಬಾಳಿ ಹೇಳಿದರು.



## ಸಮುಚ್ಚಯ ಸಭೆ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು

ಬಳ್ಳಾರಿಯ ದುರ್ಗಮ್ಮದೇವಿ ದೇವಸ್ಥಾನದಲ್ಲಿ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಸಭೆಗಳನ್ನು ನಡೆಸಲಾಗಿದೆ. ಈ ಸಭೆಯಲ್ಲಿ ನಿರಂತರವಾಗಿ 10 ಜನ ಸುಗಮಕಾರರು ಭಾಗವಹಿಸಿದ್ದು, ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವ ಹಂಚಿಕೆ, ಪೂರಕ ಕಾನೂನು ಸುಗಮಕಾರರ ಮತ್ತು ಭಾಗಾರ್ಥಿಗಳ ಸಮಾವೇಶಕ್ಕೆ ತಯಾರಿ, ನಿರ್ವಹಿಸಿದ ಪ್ರಕರಣಗಳ ಹಂಚಿಕೆ ಮಾಡುವ ಮೂಲಕ ಸಭೆಗಳನ್ನು ನಡೆಸಲಾಯಿತು. 11 ಜನ ಪೂರಕ ಕಾನೂನು ಸುಗಮಕಾರರು ಲಿಂಗ-ಸಮಾನತೆ, ಕೌಟುಂಬಿಕ ದೌರ್ಜನ್ಯ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು ಒಟ್ಟು 58 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ 980 ಮಹಿಳೆಯರು, ಪುರುಷರು ಹಾಗೂ 1460 ಪ್ರೌಢ ಶಾಲಾ ಹೆಣ್ಣು-ಗಂಡು ಮಕ್ಕಳಿಗೆ, ಪದವಿ ಪೂರ್ವ ಕಾಲೇಜಿನ ಮಕ್ಕಳಿಗೆ ಮಾಹಿತಿಯನ್ನು ನೀಡಿರುತ್ತಾರೆ.

## ಸಮಾಲೋಚನಾ ಸಭೆ

ಫೆಬ್ರವರಿ ತಿಂಗಳ 16, 2023ರಂದು ಬಳ್ಳಾರಿ ಜಿಲ್ಲೆಯ ಫ್ಯಾಮಿಲಿ ಅಸೋಸಿಯೇಶನ್ ಸಭಾಂಗಣದಲ್ಲಿ ಮಹಿಳೆಯರಿಗಿರುವ ನ್ಯಾಯ ವ್ಯವಸ್ಥೆಗಳು- ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಶ್ರೀ ಸತೀಶ್. ಜೆ. ಬಾಳಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಳ್ಳಾರಿ ಇವರು ಮಹಿಳೆಯರ ಸಶಕ್ತೀಕರಣ ಮಾಡಲು ಕಾನೂನುಗಳಲ್ಲಿ ಹಲವಾರು ಅಧಿನಿಯಮಗಳು ತಿದ್ದುಪಡಿ ಆಗುತ್ತಲೇ ಇವೆ. ಅವುಗಳ ಮಾಹಿತಿ ಸುಗಮಕಾರರಾದ ನಿಮಗೆ ತಿಳಿದಿದ್ದರೆ ನೀವು ನಿಮ್ಮ ಕ್ಷೇತ್ರದಲ್ಲಿರುವ ನೊಂದ ಮಹಿಳೆಯರಿಗೆ ಸರಿಯಾದ ಮಾಹಿತಿ ನೀಡಲು ಅನುಕೂಲವಾಗುತ್ತದೆ ಮತ್ತು ಅವರಿಗೆ ಸರಿಯಾದ ಮಾರ್ಗದರ್ಶನ ಸಲಹೆಗಳನ್ನು ನೀಡಿ ಅವರನ್ನು ಹಿಂಸೆಗಳಿಂದ ದೌರ್ಜನ್ಯಗಳಿಂದ ಹೊರತರಬಹುದು. ಹೆಣ್ಣು ಮಕ್ಕಳಿಗೆ ಮಹಿಳೆಯರಿಗೆ ಅಂತ ತುಂಬಾ ಕಾನೂನುಗಳು ಇವೆ, ಅವುಗಳ ದುರ್ಬಳಕೆ ಮಾಡಿಕೊಳ್ಳದಂತೆ ಮಾಹಿತಿ ನೀಡಿ ಎಂದು ಮಾತನಾಡಿದರು. ನಂತರ ಎಮ್ ಪುಷ್ಪಲತಾ ಮಧ್ಯಸ್ಥಿಕೆದಾರು ಹಾಗೂ ವಕೀಲರು ಸೌಹಾರ್ದ ಸಂಘದ ನಿರ್ದೇಶಕರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮಾತನಾಡುತ್ತಾ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಗೂ ಕಾನೂನಿನ ಮಾಹಿತಿ ಇರಲೇಬೇಕು ಎನ್ನುವ ಕಾರಣಕ್ಕೆ ಹಲವಾರು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡಲು ಪ್ರಾರಂಭಿಸಿದೆ. ಮೊದಲು ಮತದಾನದ ಹಕ್ಕು, ಆಸ್ತಿ ಹಕ್ಕು ಇರಲಿಲ್ಲ. ಆದರೆ ಇವಾಗ ನಮ್ಮ ಮಹಿಳೆಯರಿಗೆ ಹಕ್ಕು ಕಾನೂನುಗಳು ಇರುವುದರಿಂದ ತುಂಬಾ ಸದೃಢರಾಗಿದ್ದಾರೆ. ಇದರಿಂದಾಗಿ ಸ್ವಲ್ಪ ಮಟ್ಟಿಗೆ ದೌರ್ಜನ್ಯದಿಂದ ಹೊರಬರಲು ಸಾಧ್ಯವಾಗುತ್ತಿದೆ. ಮೊದಲಿಗಿಂತಲೂ ಈಗ ಮಹಿಳೆಯರ ಆತ್ಮಹತ್ಯೆಗಳು ಕಡಿಮೆ ಆಗಿವೆ ಎಂದು ಮಾಹಿತಿ ನೀಡಿದರು. ಈ ಸಭೆಯಲ್ಲಿ ಫ್ಯಾಮಿಲಿ ಅಸೋಸಿಯೇಶನ್, ರೀಡ್ಸ್, ಸೌಖ್ಯ ಬೆಳಕು, ವಿಮುಕ್ತಿಯ ಪ್ರತಿನಿಧಿಗಳು ಜಿಲ್ಲಾ ಪೂರಕ ಕಾನೂನು ಸುಗಮಕಾರರು ಒಟ್ಟು 32 ಪ್ರತಿನಿಧಿಗಳು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದ್ದಾರೆ.

# ಬಾಗಲಕೋಟೆ ಜಿಲ್ಲೆ

## ಪೂರಕ ಕಾನೂನು ಸುಗಮಕಾರರ ತರಬೇತಿ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು



ಹೆಣ್ಣು ಗಂಡು ಸಮಾನತೆ, ಮಹಿಳಾ ಕಾನೂನುಗಳ ಅರಿವನ್ನು ಮೂಡಿಸುವ ಉದ್ದೇಶದೊಂದಿಗೆ, ಪೂರಕ ಕಾನೂನು ಸುಗಮಕಾರರ ತಂಡವನ್ನು ಬೆಳೆಸುವ ಉದ್ದೇಶದೊಂದಿಗೆ ಬಾಗಲಕೋಟೆ ಜಿಲ್ಲೆಯಲ್ಲಿ 2ನೇ ಮತ್ತು 3ನೇ ಹಂತದ ತರಬೇತಿಗಳನ್ನು ಅಕ್ಷಯ ಸಭಾಂಗಣದಲ್ಲಿ ನಡೆಸಲಾಯಿತು. 16 ಮತ್ತು 19 ಸುಗಮಕಾರರು ಕ್ರಮವಾಗಿ ಭಾಗವಹಿಸಿದ್ದರು. ಕಾನೂನು ಸೇವಾ ಪ್ರಾಧಿಕಾರದ ಪಾನೆಲ್ ವಕೀಲರಾದ ನಾಗರತ್ನ ಜಿ ಪತ್ತಾರ್, ಗುಲಾಬ್ ನಡಾಫ್, ಸುನಿಲ್ ಕಿಸನೂರು ಕಾನೂನು ಮಾಹಿತಿಯನ್ನು ನೀಡಿದರು. ಸಖಿ ಕೇಂದ್ರದ ಶಂಕ್ರಮ್ಮ ದಮ್ಮನಕಟ್ಟಿ, ಸಖಿ ಕೇಂದ್ರದ ಮಾಹಿತಿ ನೀಡಿದರು.

ಪ್ರತೀ ತರಬೇತಿ ಪಡೆದ ಸುಗಮಕಾರರು ಪ್ರತೀ ಹಂತದಲ್ಲಿ ಅವರ ಹಳ್ಳಿಗಳಲ್ಲಿ 670 ಮಹಿಳೆಯರಿಗೆ ಮಹಿಳಾ ಕಾನೂನು, 1477 ದಾಖಲೆಯ ಮಹತ್ವದ ಮಾಹಿತಿಯನ್ನು ಸುಮಾರು 2147 ತಳಮಟ್ಟದ ಮಹಿಳೆಯರಿಗೆ ಮಾಹಿತಿ ನೀಡಿರುತ್ತಾರೆ.

## ಸಮಾವೇಶ ಕಾರ್ಯಕ್ರಮ

ಪೂರಕ ಕಾನೂನು ತರಬೇತಿ ಪಡೆದ ಸುಗಮಕಾರರು ಜ್ಞಾನವನ್ನು ಸುತ್ತಮುತ್ತಲಿನವರಿಗೆ, ನೊಂದವರಿಗೆ ವರ್ಗಾಯಿಸಬೇಕು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಜನಸಾಮಾನ್ಯರಿಗೆ ಕಾನೂನು ಅರಿವಿನ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ ಎಂದು ಬಾಗಲಕೋಟೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಹೇಮಾ ಪಸ್ತಾಪೂರ ಬಾಗಲಕೋಟೆಯ ಅಕ್ಷಯ ಸಭಾಂಗಣದಲ್ಲಿ ನಡೆದ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಡೀಡ್ಸ್ ಮಂಗಳೂರು ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಪ್ರಾಸ್ತಾವಿಕ ಮಾತನಾಡಿದರು.

ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಅಕ್ಕಮಹಾದೇವಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮವು ಡೀಡ್ಸ್ ಮಂಗಳೂರು, ಬಾಗಲಕೋಟೆ ಜಿಲ್ಲಾ ಕಾನೂನು ಸೇವೆಗಳ




ಪ್ರಾಧಿಕಾರ, ಬಾಗಲಕೋಟೆ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯ ಸಹಭಾಗಿತ್ವದಲ್ಲಿ ನಡೆಯಿತು. ಸುಗಮಕಾರರಾದ ಲತಾ ತಿಪ್ಪ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾ ಸಪ್ಪಡ್ಲಿ ಆಶಯ ಗೀತೆ ಹಾಡಿದರು. ಹಸೀನ ವಾಲಿಕರ ಸ್ವಾಗತಿಸಿ, ಮೋದಿನ್ ವಾಲಿಕರ ವಂದಿಸಿದರು.

## ಸಮಾಲೋಚನಾ ಕಾರ್ಯಕ್ರಮ




ಜನವರಿ ತಿಂಗಳ 31, 2023ರಂದು ಹೋಟೆಲ್ ಅಕ್ಷಯ ಇಂಟರ್‌ನ್ಯಾಶನಲ್ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಗಲಕೋಟೆ, ಸ್ವಾಧಾರ, ಸಖಿ ಒನ್ ಸ್ಟಾಪ್ ಸೆಂಟರ್, ಬಾದಾಮಿ ಮತ್ತು ಬಾಗಲಕೋಟೆಯ ಸಾಂತ್ವನ ಕೇಂದ್ರ, ಇನ್ನಿತರ ಮಹಿಳೆಯರೊಟ್ಟಿಗೆ ಕೆಲಸ ನಿರ್ವಹಿಸುವ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಿರುವ ನ್ಯಾಯವ್ಯವಸ್ಥೆಗಳ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಉಚಿತ ಕಾನೂನು ನೆರವು ಕುರಿತಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನೆಲ್ ವಕೀಲರಾದ ಜೆ.ಜೆ. ಕುಲಕರ್ಣಿರವರು ಮಾಹಿತಿಯನ್ನು ನೀಡಿರುತ್ತಾರೆ. ಈ ಸಭೆಯಲ್ಲಿ 21 ಜನ ಭಾಗವಹಿಸಿರುತ್ತಾರೆ

## ಸಮುಚ್ಛಯ ಸಭೆ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮ

ಬಾಗಲಕೋಟೆಯಲ್ಲಿ ನಾಲ್ಕು ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಸಭೆಗಳಲ್ಲಿ ನಿರಂತರವಾಗಿ 6 ಜನ ಭಾಗವಹಿಸುವ ಮೂಲಕ ಪೂರಕ ಕಾನೂನು ಸುಗಮಕಾರರ ಮತ್ತು ಭಾಗಾರ್ಥಿಗಳ ಸಮಾವೇಶಕ್ಕೆ ತಯಾರಿ, ಮಾಹಿತಿ ಕಾರ್ಯಕ್ರಮಗಳ ಅನುಭವ ಹಂಚಿಕೆ, ನಿರ್ವಹಿಸಿದ ಪ್ರಕರಣಗಳ ಹಂಚಿಕೆ ಮಾಡುವ ಮೂಲಕ ಸಭೆಗಳನ್ನು ನಡೆಸಲಾಯಿತು.

ಲಿಂಗ ಸಮಾನತೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೋ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು 4 ಜನ ಸುಗಮಕಾರರು 9 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ 210 ಮಹಿಳೆಯರು ಮತ್ತು ಪುರುಷರಿಗೆ ಕಾನೂನು ಮಾಹಿತಿ ನೀಡಿರುತ್ತಾರೆ.

# ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯದ ಚಟುವಟಿಕೆಗಳು

## ದಕ್ಷಿಣ ಕನ್ನಡ ಜಿಲ್ಲೆ

**ಸಮುಚ್ಛಯದ ಸಭೆ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು**

ಪ್ರತೀ ತಿಂಗಳ ಎರಡನೆಯ ಮಂಗಳವಾರ ದಕ್ಷಿಣ ಕನ್ನಡ ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಭೆಗಳು ತಪ್ಪದೆ ನಡೆದಿರುತ್ತವೆ. ಈ ಸಭೆಗಳಲ್ಲಿ ನಿರಂತರ 15 ಜನ ಸುಗಮಕಾರರು ಭಾಗವಹಿಸಿರುತ್ತಾರೆ.

ಸಮುಚ್ಛಯದ 6 ಮಂದಿ ಸುಗಮಕಾರರು ಲಿಂಗ-ಸಮಾನತೆ,ಕೌಟುಂಬಿಕ ದೌರ್ಜನ್ಯ, ಪೋಕ್ಸೋ ಕಾನೂನುಗಳ ಮಾಹಿತಿಯನ್ನು ಒಟ್ಟು 12 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ 420 ಮಹಿಳೆಯರು, ಪುರುಷರು ಹಾಗೂ ಮಕ್ಕಳಿಗೆ ಮಾಹಿತಿಯನ್ನು ನೀಡಿರುತ್ತಾರೆ.

**ಸಮಾಲೋಚನಾ ಕಾರ್ಯಕ್ರಮ**

ಮಾರ್ಚ್ ತಿಂಗಳ 30 ಮತ್ತು ಡಿಸೆಂಬರ್ ತಿಂಗಳ 19, 2022ರಂದು ಮಂಗಳೂರಿನ ಸಿಒಡಿಪಿ ಸಭಾಂಗಣದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಕಾನೂನು ಸಮಾಲೋಚನಾ ಕಾರ್ಯಕ್ರಮವನ್ನು ನಡೆಸಲಾಯಿತು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಹಿಳಾ ತರಬೇತಿದಾರರ ಸಂಚಲನ ಮಂಗಳೂರು ಮತ್ತು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಳ್ಯ, ಸಾಂತ್ವನ ಕೇಂದ್ರಗಳು, ಸಖಿ ಒನ್ ಸ್ಟಾಪ್ ಸೆಂಟರ್, ಮಹಿಳಾ ಪೋಲಿಸ್ ಠಾಣೆ ಮತ್ತು ಮಹಿಳೆಯರ ಪರವಾಗಿ ಕಾರ್ಯನಿರ್ವಹಿಸುವ ಸ್ಥಳೀಯ ಸಂಸ್ಥೆಗಳು ಮತ್ತು ನೊಂದ ಮಹಿಳೆಯರು ಪಾಲ್ಗೊಂಡು ಯಶಸ್ವಿಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ದ.ಕ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮಾನ್ಯ ಸದಸ್ಯ ಕಾರ್ಯದರ್ಶಿಯವರಾದ ಶೋಭಾ ಬಿ.ಜಿ, ಮಹಿಳಾ ಪೋಲಿಸ್ ಠಾಣೆಯ ಉಪನಿರೀಕ್ಷಕರಾದ ಶ್ರೀಕಲಾ ಕಾನೂನು ವ್ಯವಸ್ಥೆ ಮತ್ತು ಕಾನೂನು ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಭೆಯಲ್ಲಿ 28 ಜನ ಭಾಗವಹಿಸಿದ್ದರು.




## ಚಿತ್ರದುರ್ಗ ಜಿಲ್ಲೆ

**ಹೊಸ ಸುಗಮಗಾರರ ತರಬೇತಿ**

ಹೊಸ ಪೂರಕ ಕಾನೂನು ಸುಗಮಕಾರರಿಗೆ ಮೊದಲ ಹಂತದ ಕಾರ್ಯಕ್ರಮವು ನವೆಂಬರ್ ತಿಂಗಳ 12 ಮತ್ತು 13, 2022 ಮತ್ತು ಎರಡನೆಯ ಹಂತದ ಮಹಿಳಾ ಕಾನೂನು ತರಬೇತಿಯು ಜನವರಿ ತಿಂಗಳ 17 ಮತ್ತು 18, 2023ರಂದು ನಡೆಯಿತು. ಈ ತರಬೇತಿಯಲ್ಲಿ ಸಾಂತ್ವನ, ಸ್ವಾಧಾರ, ಸ್ತ್ರೀ ಒಕ್ಕೂಟ, ಸಖಿ ಕೇಂದ್ರ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಒಟ್ಟು 19 ಮಂದಿ ಪ್ರತಿನಿಧಿಗಳು ಮತ್ತು ಸುಗಮಕಾರರು ಭಾಗವಹಿಸಿದ್ದರು. ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಆಶಾಲತಾ ಬೇಕಲ್ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನೆಲ್ ವಕೀಲೆ ಗೀತಾಂಜಲಿಯವರು ಮಾಹಿತಿ ನೀಡಿದರು. ತರಬೇತಿ ಪಡೆದ 6 ಜನ ಸುಗಮಕಾರರು 8 ಲಿಂಗ-ಲಿಂಗತ್ವದ ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡಿ 145 ಜನರಿಗೆ ಲಿಂಗತ್ವದ ಮಾಹಿತಿ ನೀಡಿರುತ್ತಾರೆ.



**ಸಮುಚ್ಛಯದ ಸಭೆ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮ**

ಸಮುಚ್ಛಯದ 6 ಸಭೆಗಳನ್ನು ಗೂಗಲ್ ಮತ್ತು ದೈಹಿಕ ಹಾಜರಾತಿಯ ಮೂಲಕ ನಡೆಸಿರುತ್ತಾರೆ. ಈ ಸಭೆಯಲ್ಲಿ 12 ಜನ ಸುಗಮಗಾರರು ಭಾಗವಹಿಸಿರುತ್ತಾರೆ. ಈ ಸಭೆಗಳಲ್ಲಿ ಕಾರ್ಯಕ್ರಮಗಳ ಅನುಭವ ಹಂಚಿಕೆ ಮತ್ತು ಪ್ರಕರಣ ನಿರ್ವಹಣೆಯ ಅನುಭವಗಳನ್ನು ಚರ್ಚಿಸಲಾಗಿದೆ.

ಸಮುಚ್ಛಯದ 12 ಜನ ಪೂರಕ ಕಾನೂನು ಸುಗಮಕಾರರು ಲಿಂಗ-ಸಮಾನತೆ, ಕೌಟುಂಬಿಕ ದೌರ್ಜನ್ಯ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು ಒಟ್ಟು 45 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ 690 ಮಹಿಳೆಯರು, ಪುರುಷರು ಹಾಗೂ 1040 ಪ್ರೌಢಶಾಲಾ ಮಕ್ಕಳಿಗೆ ಮಾಹಿತಿಯನ್ನು ನೀಡಿರುತ್ತಾರೆ.

**ಸಮಾಲೋಚನಾ ಸಭೆ**

ಆಗಸ್ಟ್ ತಿಂಗಳ 8, 2022ರಂದು ಚಿತ್ರ ಡಾನ್ ಬಾಸ್ಕೋ ಸಂಸ್ಥೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಚಿತ್ರದುರ್ಗ ಮತ್ತು ಇನ್ನಿತರ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಿರುವ ನ್ಯಾಯವ್ಯವಸ್ಥೆಗಳ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೋ, ಬಾಲ್ಯವಿವಾಹ ಮತ್ತು ಉಚಿತ ಕಾನೂನು ನೆರವು ಕುರಿತಾಗಿ 2ನೇ ದರ್ಜೆಯ ಸಿವಿಲ್ ನ್ಯಾಯಾಧೀಶರಾದ ಶೀಲಾರವರು ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ 25 ಪ್ರತಿನಿಧಿಗಳು ಭಾಗವಹಿಸಿದ್ದರು.



## ಗದಗ ಜಿಲ್ಲೆ

**ಸಮುಚ್ಚಯದ ಸಭೆ ಮತ್ತು ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು**

ಈ ಸಭೆಗಳಲ್ಲಿ ನಿರಂತರವಾಗಿ 11 ಜನ ಸುಗಮಕಾರರು ಭಾಗವಹಿಸಿ ತಳಮಟ್ಟದ ಮಾಹಿತಿ ಕಾರ್ಯಕ್ರಮಗಳ ಅನುಭವ ಹಂಚಿಕೆ, ಸಮಾಲೋಚನೆ ಸಭೆಯ ಕುರಿತು ಚರ್ಚೆ ಮತ್ತು ರಾಜ್ಯ ಸಮುಚ್ಚಯದ ಸಭೆಯಲ್ಲಿ ನಡೆದ ಕ್ರಿಯಾ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು. ಹಿಂಸೆಯಿಂದ ಬಳಲಿದ ಮಹಿಳೆಯರ 11 ಪ್ರಕರಣಗಳ ನಿರ್ವಹಣೆಯ ಬಗ್ಗೆ ಸವಾಲು ಮತ್ತು ಪ್ರಕರಣಗಳ ಬಗ್ಗೆ ಹಂಚಿಕೊಳ್ಳಲಾಯಿತು. ಒಟ್ಟು 15 ಜನ ಪೂರಕ ಕಾನೂನು ಸುಗಮಕಾರರು ಲಿಂಗ–ಸಮಾನತೆ, ಕೌಟುಂಬಿಕ ದೌರ್ಜನ್ಯ, ಪೋಕ್ಸೋ ಕಾಯ್ದೆ, ಬಾಲ್ಯವಿವಾಹದಂತಹ ಕಾನೂನುಗಳ ಮಾಹಿತಿಯನ್ನು ಒಟ್ಟು 110 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ 1840 ಮಹಿಳೆಯರು ಮತ್ತು ಪುರುಷರು ಹಾಗೂ 2350 ಪ್ರೌಢ ಶಾಲಾ ಮಕ್ಕಳಿಗೆ ಮಾಹಿತಿಯನ್ನು ನೀಡಿರುತ್ತಾರೆ.

**ಸಮಾಲೋಚನಾ ಕಾರ್ಯಕ್ರಮ**

ಡಿಸೆಂಬರ್ ತಿಂಗಳ 8, 2022ರಂದು ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಭಾಂಗಣದಲ್ಲಿ ಡೀಡ್ಸ್ ಮಂಗಳೂರು, ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಗದಗ, ಗದಗ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನ ಸಹಯೋಗದೊಂದಿಗೆ ಮಹಿಳೆಯರಿಗಿರುವ ನ್ಯಾಯ ವ್ಯವಸ್ಥೆಗಳ ಕುರಿತು ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಯವರಾದ ಶ್ರೀ ಗುರುಪ್ರಸಾದ, ಮಹಿಳಾ ಪೋಲಿಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್, ಸಂರಕ್ಷಣಾ ಅಧಿಕಾರಿಯವರು, ಇಬ್ಬರು ವಕೀಲರು ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸಭೆಯಲ್ಲಿ "ಸಖಿ"



ಒನ್ ಸ್ಟಾಪ್ ಸೆಂಟರ್, ಮಹಿಳಾ ಪೋಲಿಸರು, ಮಹಿಳಾ ಸಮಾಖ್ಯಾ, ಉಜ್ವಲ ಕೇಂದ್ರದ ಸಿಬ್ಬಂದಿಯವರು, ಶಿರಹಟ್ಟಿ–ಮುಂಡರಗಿ–ರೋಣ ಸಾಂತ್ವನ ಕೇಂದ್ರದ ಸಿಬ್ಬಂದಿಯುವರು, ಪಿಎಲ್‌ವಿಯುವರು, ಡಿಎಲ್‌ಎಸ್‌ಎಯಿಂದ ಸೌಲಭ್ಯಗಳನ್ನು ಪಡೆದುಕೊಂಡ ಮಹಿಳೆಯರು, ಸಂಚಲನ ಹಾಗೂ ಪಿಎಲ್‌ಎಫ್ ತಂಡದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಸಭೆಯಲ್ಲಿ 33 ಪ್ರತಿನಿಧಿಗಳು ಭಾಗವಹಿಸಿದರು.

## ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಚಟುವಟಿಕೆಗಳು

ರಾಜ್ಯ ಸಮಿತಿಯ ಅಧ್ಯಕ್ಷರಾಗಿ ಹರಿಣಿ, ಉಪಾಧ್ಯಕ್ಷ ಶಂಕರ್, ಕಾರ್ಯದರ್ಶಿ ಫಕೀರಮ್ಮ, ಸಹ ಕಾರ್ಯದರ್ಶಿ ಕುಸುಮ, ಖಜಾಂಚಿ ಲಕ್ಷ್ಮೀ ಆಯ್ಕೆಯಾದರು. ಬಾಗಲಕೋಟೆಯಿಂದ ಮೋದಿನ್ ವಾಲಿಕರ್




ಮತ್ತು ವಿಜಯಲಕ್ಷ್ಮೀ, ಬಳ್ಳಾರಿಯಿಂದ ಲಕ್ಷ್ಮೀ ಮತ್ತು ನಿಂಗಪ್ಪ, ಕೊಪ್ಪಳದಿಂದ ಶಂಕರ್ ಸುರಾಳ, ಗದಗದಿಂದ ಗಿರಿಜಾ ಪಾಟೀಲ್ ಮತ್ತು ಫಕ್ಕೀರಮ್ಮ, ದಕ್ಷಿಣ ಕನ್ನಡದಿಂದ ಹರಿಣಿ ಮತ್ತು ಸುರೇಖ, ಚಿತ್ರದುರ್ಗದಿಂದ ದುರ್ಗಮ್ಮ, ಅಂಬುಜ, ಧಾರವಾಡದಿಂದ ಕುಸುಮ ಮತ್ತು ವಿಜಯ ಒಟ್ಟು 13 ಜನ ಸುಗಮಕಾರರು ಆಯ್ಕೆಯಾದರು.

ರಾಜ್ಯ ಮಟ್ಟದ ಸುಗಮಕಾರರ ಸಮುಚ್ಚಯದ ಏಳು ಸಭೆಗಳು ಗೂಗಲ್ ಮೀಟ್ ಮೂಲಕ ನಡೆಯಿತು. ಮೂರು ಸಭೆಗಳು ಮಂಗಳೂರಿನಲ್ಲಿ ನಡೆಯಿತು. ಮೊದಲ ಸಭೆ ಜೂನ್ ತಿಂಗಳ 17 ಮತ್ತು 19, 2022ರ ಮತ್ತು ಎರಡನೆಯ ಸಭೆ ನವೆಂಬರ್ ತಿಂಗಳ 1ರಂದು, 3ನೇ ಸಭೆ ಮಾರ್ಚ್ ತಿಂಗಳ 24, 25ರಂದು ಮಂಗಳೂರಿನ ಸಿಓಡಿಪಿ ನಂತೂರಿನಲ್ಲಿ ನಡೆಯಿತು. ಈ ಸಭೆಯಲ್ಲಿ 7 ಜಿಲ್ಲೆಗಳ ಜಿಲ್ಲಾ ಸಮಿತಿಯ ಪ್ರತಿನಿಧಿಗಳು ಮತ್ತು ರಾಜ್ಯ ಸಮಿತಿಯ ಪ್ರತಿನಿಧಿಗಳು ಒಟ್ಟು 35 ಜನ ಸುಗಮಕಾರರು ಭಾಗವಹಿಸಿದ್ದರು.

ಮೂರು ಸಭೆಗಳಲ್ಲಿ ಭಾಗವಹಿಸಿದ ಪದಾಧಿಕಾರಿಗಳ ಸಾಮರ್ಥ್ಯ ಅಭಿವೃದ್ಧಿಗೊಳಿಸಲು ಮಹಿಳಾ ಸಶಕ್ತೀಕರಣದ (ವಾಣಿ ಪೆರಿಯೋಡಿ) ಕಾರ್ಯಕ್ಷೇತ್ರದಲ್ಲಿ ಸಂಶೋಧನೆ ಪ್ರಾಮುಖ್ಯತೆ (ಅನಿತಾ ರವಿಶಂಕರ) ಮಾನಸಿಕ ಆರೋಗ್ಯಗಳ (ಕಾವ್ಯ) ಕುರಿತು ಮಾಹಿತಿ ನೀಡಲಾಯಿತು. ಮುಂದಿನ ಕಾರ್ಯಚಟುವಟಿಕೆಗಳ ಯೋಜನೆಗಳನ್ನು ತಯಾರಿಸಿ ಅವುಗಳನ್ನು ಕಾರ್ಯಗತಗೊಳಿಸಿರುವುದು (ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು, ಜಾಥಾ ಕಾರ್ಯಕ್ರಮಗಳು ಮತ್ತು ಸಮಾಲೋಚನಾ ಸಭೆಗಳು)

**ವಿಚಾರ ಸಂಕಿರಣ**

ಫೆಬ್ರವರಿ 21 ಮತ್ತು 22–2023ರಂದು ಡೀಡ್ಸ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು, ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಸಹಭಾಗಿತ್ವದಲ್ಲಿ ಅರೆಕಾಲಿಕ ಕಾನೂನು




ಸ್ವಯಂ ಸೇವಕರ ಪಾತ್ರ ಮತ್ತು ಸವಾಲುಗಳ ವಿಚಾರಸಂಕಿರಣವನ್ನು ಐ.ಎಸ್.ಐ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ

ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅರೆಕಾಲಿಕ ಸ್ವಯಂ ಸೇವಕರು 23 ಕೆಎಚ್‌ಪಿಟಿ ಮಹಿಳಾ ಸಾಮಖ್ಯ ಕರ್ನಾಟಕ ಹಾಗೂ ರಾಜ್ಯ ಪೂರಕ ಕಾನೂನು ಸುಗಮಕಾರರು ಒಟ್ಟು 38 ಜನ ಭಾಗವಹಿಸಿದ್ದರು. ಶ್ರೀ ಜೈ ಶಂಕರ ಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಕುರಿತು ಮಾಹಿತಿ ನೀಡಿದರು. ಶ್ರೀ ವಿಘ್ನೇಶ ಕುಮಾರ್ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರು ಅರೆಕಾಲಿಕ ಕಾನೂನು ಸ್ವಯಂ ಸೇವಕರ ಪಾತ್ರ ಮತ್ತು ಜವಾಬ್ದಾರಿಕಾರಿಗಳ ಬಗ್ಗೆ ಮಾಹಿತಿ ನೀಡಿದರು. ಅರೆಕಾಲಿಕ ಕಾನೂನು ಸ್ವಯಂಸೇವಕರ ಸ್ಥಿತಿಗತಿ, ಸವಾಲುಗಳ ಬಗ್ಗೆ ಪ್ರೊ. ಡಾ. ಸರಸು ಎಸ್ತರ್ ತೋಮಸ್ ಸಂಯೋಜಕರು ಮಹಿಳೆ ಮತ್ತು ಕಾನೂನು ಕೇಂದ್ರ, ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ, ಬೆಂಗಳೂರು ಇವರು ಮಾಹಿತಿಯನ್ನು ನೀಡಿದರು. ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅರೆಕಾಲಿಕ ಸ್ವಯಂ ಸೇವಕರು ಪ್ರಶ್ನೆಗಳು ಕೇಳುವ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡರು.

### ತರಬೇತಿ ಮತ್ತು ಜಾಥಾ ಹಾಗೂ ಮನೆ ಮನೆ ಮಾಹಿತಿ ಕಾರ್ಯಕ್ರಮ

ಲೈಂಗಿಕತೆ, ಸಂವಹನ, ನಾಯಕತ್ವ ಮತ್ತು ಮಾಹಿತಿ ಜಾಥಾ, ಸಂಘಟನೆಗೆ ಸಂಬಂಧಿಸಿ ಎರಡು ದಿನಗಳ ತರಬೇತಿ ಧಾರವಾಡ, ಬಳ್ಳಾರಿ, ಬಾಗಲಕೋಟೆ ಮತ್ತು ಉತ್ತರ ಕನ್ನಡದ ಕಾರಾವಾರದಲ್ಲಿ ನಡೆಯಿಲಿದೆ.

ನಾಲ್ಕು ಜಿಲ್ಲೆಗಳಲ್ಲಿ 48 ಮೆರವಣಿಗೆ ಜಾಥಾದಲ್ಲಿ 2195 ಮಹಿಳೆಯರು ಮತ್ತು ಪುರುಷರನ್ನು ಮತ್ತು 52 ಮನೆ–ಮನೆ ಭೇಟಿ ಕಾರ್ಯಕ್ರಮ ಮಾಡುವ ಮೂಲಕ 2600 ಕುಟುಂಬಗಳಿಗೆ ಲಿಂಗ–ಸಮಾನತೆ, ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ, ಪೋಕ್ಸೋ ಬಗ್ಗೆ ಕರಪತ್ರವನ್ನು ನೀಡಿ ಮಾಹಿತಿ ತಿಳಿಸಲಾಯಿತು.

## ಡೀಡ್ಸ್‌ನ ಆಡಳಿತ ಪೂರಕ ಚಟುವಟಿಕೆಗಳು

### ಆಡಳಿತ ಮಂಡಳಿಯ ಸಭೆ

ಸಪ್ಟೆಂಬರ್ ತಿಂಗಳ 29, 2022ರಂದು ಆಡಳಿತ ಮಂಡಳಿಯ ಸಭೆ ನಡೆಯಿತು. ಈ ಸಭೆಯಲ್ಲಿ ವಾರ್ಷಿಕ ವರದಿ, ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು.



### ಡೀಡ್ಸ್‌ನ ಕಾರ್ಯತಂತ್ರ ಯೋಜನೆ

2022–2027ರ ಸಾಲಿಗೆ ಡೀಡ್ಸ್‌ನ ಕಾರ್ಯತಂತ್ರ ಯೋಜನೆಯನ್ನು ತಯಾರಿಸಲು ಫೆಬ್ರವರಿ ತಿಂಗಳ 9ರಿಂದ 11 ಮತ್ತು ಸಪ್ಟೆಂಬರ್ ತಿಂಗಳ 26 ಮತ್ತು 27, 2022ರಂದು ಕಾರ್ಯಾಗಾರ ನಡೆಸಲಾಯಿತು. ಡೀಡ್ಸ್‌ನ ಸಲಹೆಗಾರರಾದ ಮುಂಬಯಿಯ ಮರೀಟಾ ಈಶ್ವರನ್‌ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಈ ಕಾರ್ಯಗಾರದಲ್ಲಿ ಡೀಡ್ಸ್ ಆಡಳಿತ ಮಂಡಳಿಯ ಸದಸ್ಯರು, ಆಯ್ದ ಸಂಸ್ಥೆಗಳ ಪ್ರತಿನಿಧಿಗಳು, ಡೀಡ್ಸ್ ಸಿಬ್ಬಂದಿಗಳು ಭಾಗವಹಿಸಿದ್ದರು.



### ಕಲಿಕಾ ಪ್ರವಾಸ

ಜ್ಞಾನ ಮತ್ತು ಅನುಭವ ಪಡೆದುಕೊಳ್ಳಲು ಒಂದು ವಾರ ಕಲಿಕಾ ಪ್ರವಾಸವನ್ನು ಡೀಡ್ಸ್ ಸಿಬ್ಬಂದಿಗಳು ಅಕ್ಟೋಬರ್ ತಿಂಗಳ 10ರಿಂದ 16ರ ತನಕ ಗುಜರಾತಿನ ಅಹ್ಮದಾಬಾದ್‌ಗೆ ಭೇಟಿ ನೀಡಲಾಯಿತು.

ಮಹಿಳೆಯರಿಗೋಸ್ಕರ ಕಾರ್ಯ ನಿರ್ವಹಿಸುವ ಸಂಸ್ಥೆಗಳಾದ ಹ್ಯೂಮಾನ್ ಡೆವಲಪ್ ರಿಸರ್ಚ್ ಸೆಂಟರ್, ಅವಾಜ್ ಜನ್ ವಿಕಾಸ, ಸೆಂಟರ್ ಪಾರ್ ಸೋಶಿಯಲ್ ಜಸ್ಟೀಸ್ ಸಂಸ್ಥೆಗಳಿಗೆ ಭೇಟಿ ನೀಡಲಾಯಿತು.



ಗುಜರಾತಿನಲ್ಲಿರುವ ಅಹ್ಮದಾಬಾದ್ ಸಬರ್‌ಮತಿಯಲ್ಲಿರುವ ಗಾಂಧಿ ಆಶ್ರಮಕ್ಕೆ ಭೇಟಿ ನೀಡಲಾಯಿತು. ಗಾಂಧೀಜಿಯವರು ಬಳಸಿದ ವಸ್ತುಗಳನ್ನು ಮತ್ತು ಅವರು ವಾಸಿಸಿದ ಮನೆಯನ್ನು ವೀಕ್ಷಿಸಲಾಯಿತು. ಆಶ್ರಮದ ಇತಿಹಾಸವನ್ನು ತಿಳಿದುಕೊಳ್ಳಲಾಯಿತು. ಎರಡು ದಿನ ಐತಿಹಾಸಿಕ ಸ್ಥಳಗಳಿಗೆ ಭೇಟಿಕೊಡಲಾಯಿತು. ಗೋವಾದಲ್ಲಿ ವಕೀಲರಾದ ಅಲ್ಬಟೀನಾ ಅಲ್ಮೇಡಾ ಮತ್ತು ಅನ್ಯಾಯಿ ರಹಿತ ಜಿಂದಗಿ ಸಂಸ್ಥೆಗೆ ಭೇಟಿ ನೀಡಲಾಯಿತು.



## Women's Fund Asia ಯೋಜನೆಯ ಚಟುವಟಿಕೆಗಳು

ಡೀಡ್ಸ್ ಸಂಸ್ಥೆಯು 2021–2022ರ ಸಾಲಿನಲ್ಲಿ ಉಳ್ಳಾಲ ಮತ್ತು ವಾಮಂಜೂರಿನಲ್ಲಿ ಹೆಣ್ಣು ಗಂಡು ಅಸಮಾನತೆ, ಕೌಟುಂಬಿಕ ಹಿಂಸೆಯನ್ನು ಕಡಿಮೆಗೊಳಿಸಲು ಕೇಂದ್ರೀಕರಿಸಿ ಚಟುವಟಿಕೆಗಳನ್ನು ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿರುತ್ತದೆ. ಲಿಂಗತ್ವ ಮತ್ತು ಮಹಿಳಾ ಕಾನೂನುಗಳ ಕುರಿತು ತಳಮಟ್ಟದಲ್ಲಿ ಮಾಹಿತಿ ನೀಡಬಲ್ಲ ತರಬೇತಿದಾರರನ್ನು ರೂಪಿಸುವ ಉದ್ದೇಶದಿಂದ ಪೂರಕ ಕಾನೂನು ಸುಗಮಕಾರರ ತರಬೇತಿಯನ್ನು




ಹಮ್ಮಿಕೊಳ್ಳಲಾಯಿತು. ಈ ಅವಧಿಯಲ್ಲಿ ಉಳ್ಳಾಲ ಮತ್ತು ವಾಮಂಜೂರಿನಲ್ಲಿ ಕನಿಷ್ಠ 30 ಮಂದಿ ಮಹಿಳಾ ತರಬೇತಿದಾರರನ್ನು ರೂಪಿಸುವ ಹಾಗೂ ಕನಿಷ್ಠ 900 ಮಂದಿ ತಳಮಟ್ಟದ ಮಹಿಳೆಯರಿಗೆ ಮಾಹಿತಿ ತಲುಪಿಸುವ ಗುರಿಯಿಂದ ಡೀಡ್ಸ್ ತನ್ನ ಕಾರ್ಯವನ್ನು ಆರಂಭಿಸಿತು.

ಪ್ರಸ್ತುತ ಅವಧಿಯಲ್ಲಿ ಒಟ್ಟು 29 ಲಿಂಗ–ಲಿಂಗತ್ವ ಮತ್ತು ಕಾನೂನು ಮಾಹಿತಿ ಕಾರ್ಯಕ್ರಮಗಳು ನಡೆದಿವೆ. ಸುಮಾರು 1250 ಮಹಿಳೆಯರಿಗೆ ನೇರವಾಗಿ ಮಾಹಿತಿ ತಲುಪಿಸುವ ಕಾರ್ಯ ನಡೆದಿದೆ. 10 ಮಂದಿ ತರಬೇತಿದಾರರು ಪರಿಣಾಮಕಾರಿಯಾಗಿ ತರಬೇತಿ ನೀಡಬಲ್ಲ ತರಬೇತಿದಾರರಾಗಿದ್ದಾರೆ. ವಿಶ್ವ ಮಹಿಳಾ ದೌರ್ಜನ್ಯ ನಿವಾರಣಾ ದಿನದ



ಪ್ರಯುಕ್ತ ನಡೆಸಿದ ಅರಿವಿನ ಜಾಥಾ ಸಂದರ್ಭದಲ್ಲಿ 4000ಕ್ಕೂ ಹೆಚ್ಚಿನ ಜನರಿಗೆ ಮಾಹಿತಿಯನ್ನು ಹಂಚಲಾಗಿದೆ. ಅಂದರೆ ಒಟ್ಟು 5000ಕ್ಕೂ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗಿದೆ.

ಯೋಜನೆಯ ಆರಂಭಿಕ ಹಂತದಲ್ಲಿ ಓರಿಯೆಂಟೇಷನ್ ನೀಡುವುದರ ಮೂಲಕ ಪೂರಕ ಕಾನೂನು ಸುಗಮಕಾರರಾಗಲು ಆಸಕ್ತಿಯಿರುವವರನ್ನು ಆಯ್ಕೆ ಮಾಡಲಾಯಿತು. ಉಳ್ಳಾಲ ಮತ್ತು ವಾಮಂಜೂರಿನಲ್ಲಿ ತಲಾ ಎರಡು ಓರಿಯೆಂಟೇಷನ್ ಕಾರ್ಯಕ್ರಮಗಳನ್ನು ನಡೆಸಲಾಯಿತು. 56 ಮಂದಿ ಭಾಗವಹಿಸಿದ್ದು 36 ಮಂದಿ ಆಯ್ಕೆಯಾದರು. ಕೆಲವು ವೈಯಕ್ತಿಕ ಕಾರಣಗಳಿಂದಾಗಿ ಯೋಜನೆಯ ಅಂತ್ಯದ ವೇಳೆಗೆ 27 ಮಂದಿ ಮಾತ್ರ ಲಿಂಗತ್ವ ಹಾಗೂ ಕಾನೂನು ವಿಷಯಗಳಲ್ಲಿ ಎರಡು ಹಂತಗಳಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. ಇವರಲ್ಲಿ 14 ಮಂದಿ ಲಿಂಗತ್ವದ ಬಗ್ಗೆ, 10 ಮಂದಿ ಕಾನೂನುಗಳ ವಿಷಯದಲ್ಲಿ ತಳಮಟ್ಟದಲ್ಲಿ ಹಾಗೂ ಶಾಲೆಗಳಲ್ಲಿ ಮಾಹಿತಿ ನೀಡಿದ್ದಾರೆ. ಒಟ್ಟು 60 (ಉಳ್ಳಾಲ 31, ವಾಮಂಜೂರು 29) ತಳಮಟ್ಟದ ಲಿಂಗತ್ವ ಮಾಹಿತಿ ಕಾರ್ಯಕ್ರಮಗಳು ಹಾಗೂ 22 (ಉಳ್ಳಾಲ 12, ವಾಮಂಜೂರು 10) ಕಾನೂನು ಮಾಹಿತಿ ಕಾರ್ಯಕ್ರಮಗಳು ನಡೆದಿವೆ. ಸುಮಾರು 109 ಮಹಿಳೆಯರಿಗೆ ಮಾಹಿತಿ ತಲುಪಿಸಿದಂತಾಗಿದೆ. ತರಬೇತಿಯ ಭಾಗವಾಗಿ ಸಖಿ ಕೇಂದ್ರ, ಪೊಲೀಸ್ ಸ್ಟೇಷನ್‌ಗಳಿಗೆ ಭೇಟಿ ನೀಡಲಾಗಿದೆ. ಇದರಿಂದ ಮಹಿಳೆಯರಿಗೆ ನೊಂದ ಮಹಿಳೆಯರಿಗಿರುವ ಸೌಲಭ್ಯಗಳ ಅರಿವಾಗಿದೆ.

ಡೀಡ್ಸ್ ಸಂಸ್ಥೆಯು ಸಮಾನ ಮನಸ್ಕ ಸಂಘಟನೆಗಳು ಹಾಗೂ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ನವೆಂಬರ್ 24, 2022ರಂದು ವಿಶ್ವ ಮಹಿಳಾ ದೌರ್ಜನ್ಯ ನಿವಾರಣಾ ದಿನದ ಅಂಗವಾಗಿ ಸಮಾನತೆಯ ಹಿಂಸಾರಹಿತ ಕುಟುಂಬ ಹಾಗೂ ಸಮಾಜಕ್ಕಾಗಿ ಅರಿವಿನ ಜಾಥಾ ಮತ್ತು ಸಮಾವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತೊಕ್ಕೊಟ್ಟು, ದೇರಳಕಟ್ಟೆ, ಕುತ್ತಾರು, ಅಸೈಗೋಳಿ, ಕೋಟೆಕಾರ್ ಬೀರಿ, ಮುಡಿಪು, ಸೋಮೇಶ್ವರ, ಉಳ್ಳಾಲ, ಮುಕ್ಕಚ್ಚೇರಿ, ಉಳ್ಳಾಲಗಳಲ್ಲಿ ಬೆಳಿಗ್ಗೆ 9.30 ಗಂಟೆಗೆ ಜಾಥಾ ಆರಂಭಗೊಂಡಿತು. ಮನೆಮನೆಗಳಿಗೆ, ಅಂಗಡಿಗಳಿಗೆ,




ಬಸ್ ನಿರ್ವಾಹಕರಿಗೆ, ಬಸ್‌ನಲ್ಲಿದ್ದ ಜನರಿಗೆ, ರಿಕ್ಷಾ ಪಾರ್ಕ್‌ನಲ್ಲಿದ್ದ ರಿಕ್ಷಾ ಚಾಲಕರಿಗೆ ಮಾಹಿತಿ ಕರಪತ್ರಗಳನ್ನು ಹಂಚಲಾಯಿತು. ಮಧ್ಯಾಹ್ನ 12 ಗಂಟೆಗೆ ಗಟ್ಟಿ ಸಮಾಜ, ತೊಕ್ಕೊಟ್ಟು ಇಲ್ಲಿ ಮಹಿಳಾ ಸಮಾವೇಶ ನಡೆಯಿತು. ಸಮಾನತೆಯ ಹಿಂಸಾರಹಿತ ಸೌಹಾರ್ದಯುತ ಸಮಾಜ ನಮ್ಮದಾಗಲಿ ಎನ್ನುವ ಆಶಯ ನುಡಿ ಹಾಗೂ ವಿಶ್ವಸಂಸ್ಥೆಯ ಮಹಿಳಾ ದೌರ್ಜನ್ಯ ನಿವಾರಣಾ ದಿನ 2022ರ ಘೋಷವಾಕ್ಯ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯವನ್ನು ನಿರ್ಮೂಲನೆಗೊಳಿಸಲು ಸಂಘಟಿತರಾಗೋಣ ಎಂಬ ಬ್ಯಾನರ್‌ನ್ನು ಅನಾವರಣಗೊಳಿಸುವ ಮೂಲಕ ಕಾರ್ಯಕ್ರಮವನ್ನು ದಕ್ಷಿಣ ಕನ್ನಡದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಪಾಪ ಬೋವಿಯರವು ಉದ್ಘಾಟನೆ ಮಾಡಿದರು. ಮಹಿಳೆಯರ ಮೇಲಿನ ಹಿಂಸೆ ಹೆಚ್ಚಾಗುತ್ತಿದೆ. ಅದನ್ನು ತಡೆಯಲು ಇಲಾಖೆಯು ಸಾಕಷ್ಟು ಶ್ರಮಿಸುತ್ತಿದೆ. ಸಾಂತ್ವನ ಸಖಿ ಕೇಂದ್ರಗಳನ್ನು ಸಂಪರ್ಕಿಸುವ ಮೂಲಕ ಹಿಂಸೆಗೊಳಗಾದ ಮಹಿಳೆಯರು ನ್ಯಾಯವನ್ನು ಪಡೆಯಲು ಪ್ರಯತ್ನಿಸಬೇಕು ಎಂದು ತಮ್ಮ ಉದ್ಘಾಟನೆ ಭಾಷಣದಲ್ಲಿ ಹೇಳಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಜಯಪುರದ ಅಕ್ಕಮಹಾದೇವಿ ವಿ. ವಿ. ಯ ವಿಶ್ರಾಂತ ಕುಲಪತಿಗಳಾದ ಡಾ. ಸಬಿಹಾ ಭೂಮಿಗೌಡರವರು ದಿಕ್ಸೂಚಿ ಭಾಷಣ ಮಾಡಿದರು. "ನಾವಿಂದು ಕಲುಷಿತ ವಾತಾವರಣದಲ್ಲಿ ಬದುಕುತ್ತಿದೇವೆ. ನಮ್ಮ ಬಾಲ್ಯದ ದಿನಗಳಿಗೆ ಹೋಲಿಸಿದರೆ ಇಂದಿನ ಕಾಲದಲ್ಲಿ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಚಲನವಲನವ ಸ್ವಾತಂತ್ರ್ಯ ಹೆಚ್ಚಾಗಿದೆ. ಮಹಿಳಾಪರವಾದ ಕಾನೂನುಗಳು ಜಾರಿಗೆ ಬಂದಿವೆ. ಆದರೆ ಹುಟ್ಟಿನಿಂದ ಸಾಯುವವರೆಗೆ ಹೆಣ್ಣು ಎನ್ನುವ ಕಾಣರಕ್ಕೆ ಕೊಲೆ, ಅತ್ಯಾಚಾರಗಳು ಹಿಂಸೆ ಜಾಸ್ತಿಯಾಗುತ್ತಿದೆ. ಇದಕ್ಕಿರುವ ಕಾರಣಗಳ ಬಗ್ಗೆ ನಾವೆಲ್ಲರೂ ಚಿಂತಿಸಬೇಕಾಗಿದೆ. ಇದಕ್ಕೆ ಮುಖ್ಯ ಕಾರಣ ಬದಲಾಗದ ಮನಸ್ಥಿತಿ. ಆದ್ದರಿಂದ ಮನಸ್ಥಿತಿ ಬದಲಾಗಬೇಕು. ಅದಕ್ಕಾಗಿ ನಾವು ಕಾರ್ಯಾಚರಿಸಬೇಕಾದ ಕಾಲ ಬಂದಿದೆ. ದೌರ್ಜನ್ಯದ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ.
ನಮ್ಮ ಗಂಡು ಮಕ್ಕಳಿಗೆ ಈ ಬಗ್ಗೆ ಅರಿವನ್ನು ನೀಡಬೇಕಾಗಿದೆ ಎಂದು ಹೇಳಿದರು.




ಡೀಡ್ಸ್ ಮಂಗಳೂರು ದಕ್ಷಿಣ ಕನ್ನಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೋಲಿಸ್ ಆಯುಕ್ತರ ಕಛೇರಿ, ಮಂಗಳೂರು ನಗರ ಪೋಲಿಸ್, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಸಿ.ಒ.ಡಿ.ಪಿ (ರಿ) ಮಂಗಳೂರು, ಜಮಾತೆ– ಇ–ಇಸ್ಲಾಂಹಿಂದ್, ಜನ ಶಿಕ್ಷಣ ಟ್ರಸ್ಟ್ ಮುಡಿಪು, ಪ್ರಜ್ಞಾ ಕೌನ್ಸಿಲಿಂಗ್ ಸೆಂಟರ್, ದ.ಕ. ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನ,



ಶ್ರೀ ಪ್ರಶಾಂತಿ ಮಹಿಳಾ ಮಂಡಲ (ರಿ) ಮಹಾಲಕ್ಷ್ಮಿ ಮಹಿಳಾ ಮಂಡಲ, ಸೋಮೇಶ್ವರ ಫ್ರೆಂಡ್ಸ್ ಕ್ಲಬ್, ತರಿಕಿಟ ಕಲಾ ಕಮ್ಮಟ (ರಿ) ರೋಶನಿ ಸಮಾಜ ಸೇವಾ ಕಾಲೇಜು, ಸೈಂಟ್ ಅಲೋಶಿಯಸ್ ಸಮಾಜ ಸೇವಾ ಕಾಲೇಜು, ಸೈಂಟ್ ಅಲೋಶಿಯಶ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆಂಡ್ ಇನ್ಫಾರ್ಮೇಶನ್ ಟೆಕ್ನಾಲಜಿ, ಡಾಕ್ಟರ್ ದಯಾನಂದ ಪೈ ಸತೀಶ್ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜು, ಯೇನೆಪೋಯ ಪರಿಗಣಿಸಲ್ಪಟ್ಟ ವಿಶ್ವವಿದ್ಯಾನಿಲಯ, ಇಂಡಿಯನ್ ಕಮ್ಯುನಿಟಿ ಆಕ್ಟಿವಿಸ್ಟ್ ನೆಟ್‌ವರ್ಕ್ ಉಳ್ಳಾಲ ನಗರಸಭೆ, ಸೋಮೇಶ್ವರ ಪುರಸಭೆ, ಕೋಟೆಕಾರು ಪಟ್ಟಣ ಪಂಚಾಯತ್, ತಲಪಾಡಿ ಗ್ರಾಮ ಪಂಚಾಯತ್, ಮುನ್ನೂರು ಗ್ರಾಮ ಪಂಚಾಯತ್, ಬೆಳ್ಮ ಗ್ರಾಮ ಪಂಚಾಯತ್, ಕುರ್ನಾಡು ಗ್ರಾಮ ಪಂಚಾಯತ್ ಇವುಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮವು ನಡೆಯಿತು.

ವಾಮಂಜೂರಿನಲ್ಲಿ ಮನೆಮನೆಗೆ ಭೇಟಿ ನೀಡಿ ಮಾಹಿತಿಯನ್ನು ಹಂಚುವುದೆಂದು ನಿರ್ಧರಿಸಲಾಯಿತು. ಇದರಿಂದ ಮನೆ ಮನೆಗೆ ಮಾಹಿತಿ ಸಿಗುತ್ತದೆ. ಜೊತೆಗೆ ನಮಗೆ ಜನರ ಸ್ಥಿತಿಗತಿಯ ಅರಿವಾಗುತ್ತದೆ ಮತ್ತು ಜನರ ನೇರ ಸಂಪರ್ಕ ದೊರೆಯುತ್ತದೆ ಎನ್ನುವುದು ಮುಖ್ಯ ಉದ್ದೇಶವಾಗಿತ್ತು. ಅದರಂತೆ ದಿನಾಂಕ 1–12–2022ರಂದು ವಾಮಂಜೂರಿನ ಆಶ್ರಯ ನಗರದ ಅಂಗನವಾಡಿಯಲ್ಲಿ ಜಾಥಾ ಉದ್ಘಾಟಿಸಲಾಯಿತು. ನಂತರ ಸುಮಾರು 400 ಮನೆಗಳಿಗೆ ಕರಪತ್ರ ಹಂಚಿ ಮಾಹಿತಿ ನೀಡಲಾಯಿತು.

ದಿನಾಂಕ 2–12–2022ರಂದು ಮೂಡುಶೆಡ್ಡೆ ಎದುರುಪದವಿನಲ್ಲಿ ಮನೆ ಮನೆಗೆ ಭೇಟಿ ಕೊಟ್ಟು ಕರಪತ್ರ ಹಂಚಿ ಮಾಹಿತಿ ಕೊಡಲಾಯಿತು. ಇಲ್ಲಿ ಸುಮಾರು 200 ಮನೆಗಳಿಗೆ ಕರಪತ್ರ ಮಾಹಿತಿ ತಲುಪಿಸಲಾಗಿದೆ. ಇಲ್ಲಿ ತುಂಬಾ ಪ್ರಕರಣಗಳು ಸಿಕ್ಕಿವೆ. ಒಂದು ಮನೆಯಲ್ಲಿ ಗಂಡನಿಂದ ಕಿರಿ ಕಿರಿ ಆಗುತ್ತಿತ್ತು. ನಾವು ಹೆಂಡತಿ ಮಕ್ಕಳ ಹೊಡೆತ ಜೈಲು ವಾಸ ಖಚಿತ ಎಂಬ ಕ್ಯಾಲೆಂಡರನ್ನು ಅಲ್ಲಿ ಪ್ರದರ್ಶಿಸಿದೆವು.

ಒಂದು ವರ್ಷದ ಅವಧಿಯಲ್ಲಿ ಕಾನೂನು ಸುಗಮಕಾರರಲ್ಲಿ ಹಲವು ಬದಲಾವಣೆಗಳನ್ನು ಗಮನಿಸಬಹುದಾಗಿದೆ. ಪೂರಕ ಕಾನೂನು ಸುಗಮಕಾರರು ಲಿಂಗ–ಲಿಂಗತ್ವದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ದೈಹಿಕ ಭಿನ್ನತೆಯನ್ನು ಹೊರತುಪಡಿಸಿ, ಗಂಡು, ಹೆಣ್ಣು ಯಾವುದೇ ಕೆಲಸ ಮಾಡಬಹುದೆಂದು ಅರ್ಥಮಾಡಿ ಕೊಂಡಿದ್ದಾರೆ. ಸುಗಮಕಾರರಲ್ಲಿ ಧೈರ್ಯ, ಆತ್ಮವಿಶ್ವಾಸ ಹೆಚ್ಚಾಗಿರುವುದನ್ನು ಗಮನಿಸಿದ್ದೇವೆ. ಓರಿಯೆಂಟೇಶನ್ ಹಾಗೂ ತರಬೇತಿಯ ಸಂದರ್ಭದಲ್ಲಿ ತಳಮಟ್ಟದ ಮಾಹಿತಿ ನೀಡಬೇಕೆಂದು ಹೇಳಿದಾಗ ಅವರು ಹಿಂಜರಿದರು. ಅವರಿಗೆ ಮಾಹಿತಿ ಕೈಪಿಡಿ ಮತ್ತು ಕರಪತ್ರವನ್ನು ಕೊಟ್ಟು ಅವರನ್ನು ತರಬೇತಿಗೊಳಿಸಿದ್ದೇವೆ. ಈಗ ಅವರು ಒಬ್ಬರೇ ಮಾಹಿತಿ ನೀಡಲು ಸಮರ್ಥರಾಗಿದ್ದಾರೆ. ಪೊಲೀಸ್ ಸ್ಟೇಷನ್ ಕೋರ್ಟು ಬಗ್ಗೆ ಇತ್ತ ಭಯ ಮರೆಯಾಗಿದೆ. ಸಖಿ ಸಾಂತ್ವಾನ ಕೇಂದ್ರಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಸಹಾಯವಾಣಿ ಬಗ್ಗೆ ಮಾಹಿತಿ ಇದೆ. ಈಗ ಸುಗಮಕಾರರು ಅವರ ಸುತ್ತಮುತ್ತಲಲ್ಲಿರುವ ಪ್ರಕರಣಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ಅರಿವಿನ ಮಾಹಿತಿ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

# ಅನುಭವ ಹಂಚಿಕೆ

ಮೊದಲನೆಯದಾಗಿ ನನಗೆ ರಾಜ್ಯಮಟ್ಟದ ಸಮುಚ್ಚಯದ ಅಧ್ಯಕ್ಷರಾಗಿ ನೇಮಕ ಮಾಡಿದ ಎಲ್ಲಾ ಜಿಲ್ಲೆಯ ಪದಾಧಿಕಾರಿಗಳಿಗೆ ಹಾಗೂ ಡೀಡ್ಸ್ ಸಂಸ್ಥೆಗೆ ನನ್ನ ಅಭಿನಂದನೆಗಳು. ಸುಮಾರು 10 ವರ್ಷಗಳ ಹಿಂದೆ ನಾನು ಡೀಡ್ಸ್ ನಡೆಸಿದ 15 ದಿನದ ತರಬೇತಿಯಲ್ಲಿ ಭಾಗವಹಿಸಿದ್ದು, ಆ ನಂತರ ಈ ಸಮಾಜವನ್ನು ಗಮನಿಸಲು ಪ್ರಾರಂಭಿಸಿದೆ. ನಮ್ಮ ಸಮಾಜದಲ್ಲಿ ಲಿಂಗ, ಲಿಂಗತ್ವ ರೂಢಿಗತವಾಗಿ ಬಂದ ಪದ್ಧತಿ. ಹೆಣ್ಣು ಮಕ್ಕಳಿಗೆ ತೋರುವ ತಾರತಮ್ಯ, ಇದರಿಂದ ಮಕ್ಕಳಿಗೆ, ಮನೆಯಲ್ಲಿ, ಕೆಲಸ ಸ್ಥಳದಲ್ಲಿ ಆಗುವ ಹಿಂಸೆ, ಇದರ ಪರಿಣಾಮಗಳು, ಇದಕ್ಕೆ ಸರ್ಕಾರ ತಂದಿರುವ ಕಾನೂನು, ಆ ಕಾನೂನಿಗೆ ಅನುಕೂಲವಾಗುವ ವ್ಯವಸ್ಥೆಗಳು, ಮಹಿಳೆಯರು ನಮ್ಮ ಬಳಿಗೆ ದೂರು ಹಿಡಿದು ಬಂದಾಗ, ಅವರ ಜೊತೆ ಮಾತಾಡುವ ರೀತಿ, ಹೇಗೆ ನಮ್ಮ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ಬರುವಂತೆ ಮಾಡುವುದು, ಅಂತಿಮವಾಗಿ ಹೆಣ್ಣು ಮಕ್ಕಳು ಎಲ್ಲಿದ್ದರೂ ಅವರು ಶಾಂತಿಯುತವಾದ ಜೀವವನ್ನು ನಡೆಸಲು ಬೇಕಾದ ಎಲ್ಲಾ ರೀತಿಯ ತರಬೇತಿಯನ್ನು ಡೀಡ್ಸ್ ಸಂಸ್ಥೆ ನಮಗೆ ನೀಡಿದೆ. ಈಗ ಪ್ರತಿಯೊಂದು ದೂರು ಬಂದಾಗ, ಅದಕ್ಕೆ ಸ್ಪಂದಿಸಿ, ಮಹಿಳೆಗೆ ಹಿಂಸಾಮುಕ್ತ ಸಮಾಜದಲ್ಲಿ ಬದುಕಲು ಈ ತರಬೇತಿ ಸಹಾಯ ಮಾಡಿದ್ದಲ್ಲದೆ, ಇತರ ಪಿಎಲ್‌ಎಫ್‌ಗಳನ್ನು ಬೆಳೆಸಲು ಕೂಡಾ ಸಾಧ್ಯವಾಗಿದೆ. ರಾಜ್ಯ ಮಟ್ಟದಲ್ಲಿ ಈ ತರಬೇತಿಗಳು ನಡೆದು, ಹೆಣ್ಣು ಮಕ್ಕಳನ್ನು ಶಕ್ತಿ ಹೀನೆಯಿಂದ ಅವಳಿಗೂ ಸಾಮರ್ಥ್ಯವಿದೆ ಎಂದು ತೋರಿಸಲು ಸಹಾಯ ಆಗಿದೆ. ಅಲ್ಲದೆ ಅವರು ತಳಮಟ್ಟದಲ್ಲಿ ಮಾಹಿತಿಯನ್ನು ಪಸರಿಸಲು ಸಹಾಯ ಆಗಿದೆ. ಕಳೆದ 10 ವರ್ಷಗಳಲ್ಲಿ ಸಾಕಷ್ಟು ಕೆಲಸ ಮಾಡಿದ ಅನುಭವ ನನಗೆ ಇರುವುದರಿಂದ ಇವತ್ತು ಪೋಲಿಸು, ಅಂಗನವಾಡಿ, ಆಶಾ ಕಾರ್ಯಕರ್ತರಿಗೆ ಲಿಂಗ ಲಿಂಗತ್ವ, ಕಾನೂನುಗಳ ಬಗ್ಗೆ ಮಾಹಿತಿ ನೀಡಲು ಸಂತೋಷವಾಗುತ್ತದೆ. ಈವಾಗ ನಾನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಸಖಿ ಹಾಗೂ ಮೂಲಕ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗಿದೆ. ಹಾಗೆಯೇ ಸಖಿ ಸಂಸ್ಥೆಯಲ್ಲಿ ಟಾಸ್ಕ್ ಪೋರ್ಸ್, ಫೋಸ್ ಕಮಿಟಿ, ಹಾಗೆಯೇ ಮಂಗಳೂರಿನಲ್ಲಿ ಮಹಿಳೆಯರ ವಸತಿ ಗೃಹ ಅದರ ಕಮಿಟಿಯಲ್ಲಿ ಸದಸ್ಯೆ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ಈಗ ರಾಷ್ಟ್ರಮಟ್ಟದ ಇಂಡಿಯನ್ ಕಮಿಟಿ ಆರ್ಟಿಸ್ಟ್ ನೆಟ್‌ವರ್ಕ್‌ನ ಜಂಡರ್ ಕನ್ವೀನರ್ ಕೂಡಾ ಆಗಿದ್ದೇನೆ. 2022 ಸಪ್ಟೆಂಬರ್‌ನಿಂದ ಕಮ್ಯುನಿಟಿ ರೇಡಿಯೊ ಸಾರಂಗ 107.8 ಎಫ್‌ಎಂನ ಹಿಂಸೆಗೆ ನೊ ಅನ್ನಿ ಕಾರ್ಯಕ್ರಮಕ್ಕೆ ನನ್ನ ಸಪೋರ್ಟ್ ನಡೆದ ಏಳು ಸಭೆಗಳಲ್ಲಿ ಪಡೆದಿದ್ದಾರೆ. ಇಲ್ಲಿ 7 ಕಮ್ಯುನಿಟಿಯಲ್ಲಿ ಲಿಂಗತ್ವ, ಕಾನೂನು ಬಗ್ಗೆ ಮಾಹಿತಿ ನೀಡುವ ಅವಕಾಶ ಕೂಡಾ ಸಿಕ್ಕಿದೆ. ಲೀಗಲ್ ಆಗಿರುವ ಬಗ್ಗೆ ಟಿವಿ ಕಾರ್ಯಕ್ರಮದಲ್ಲಿ ಮರ್ಲಿನ್ ಜೊತೆ ಪಾಲುಗೊಂಡಿರುವ ಅನುಭವ ಕೂಡಾ ಇದೆ. ಲಿಂಗತ್ವ ಮೈನ್ ಸ್ಟ್ರಿಮಿಂಗ ಆಂಡ್ ವಿಮೆನ್ ಎಂಪವರ್‌ಮೆಂಟ್ ಎಂಬ ಸಂವಾದ ಕಾರ್ಯಕ್ರಮ ಭಾಗವಹಿಸುವ ಅವಕಾಶವನ್ನು ಎಫ್‌ಇಎಸ್ ಸಂಸ್ಥೆಯು ತನ್ನ ಸಹಭಾಗಿ ಸಂಸ್ಥೆಗಳ ಜತೆ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದೆ. ಮಹಿಳೆಯರ ಮತ್ತು ಮಕ್ಕಳ ವಿರುದ್ಧದ ಹಿಂಸೆಯನ್ನು ಎದುರಿಸುವುದು ಎಂಬುವುದರ ಮೇಲೆ ತರಬೇತಿಯು 25 ದಿನಗಳ ಕಾಲ ಇಸ್ರೇಲ್‌ನಲ್ಲಿ ಯುನೆಸ್ಕೋದ ಸಹಯೋಗದಲ್ಲಿ ನಡೆಯಿತು. ಈ ತರಬೇತಿಗೆ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದೇನೆ.

**ಹರಿಣಿ** ಅಧ್ಯಕ್ಷರು, ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯ

---

ನಾನು ಡೀಡ್ಸ್ ಸಂಸ್ಥೆ ಸೇರುವುದಕ್ಕಿಂತ ಮುಂಚೆ ನನಗೆ ಅಲ್ಪ ಸ್ವಲ್ಪ ಮಹಿಳಾ ಕಾನೂನಿನ ಮಾಹಿತಿ ಗೊತ್ತಿತ್ತು. ಆದರೆ ಡೀಡ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವಾಗ ನನಗೆ ಇದರ ಮಹತ್ವ ಏನೆನ್ನುವುದು ಗೊತ್ತಾಯಿತು. ಆ ದಿನದ ಲಿಂಗ ಸಮಾನತೆಯ ತರಬೇತಿಯಲ್ಲಿ ಭಾಗವಹಿಸಿದ ನಂತರವೇ ಹೆಣ್ಣು–ಗಂಡು ಸಮಾನರು ಯಾರೂ ಹೆಚ್ಚಿನವರಲ್ಲ ಅನ್ನೋದು ಗೊತ್ತಾಯಿತು. ನಾನು ಕೂಡಾ ಗಂಡು ಮಕ್ಕಳು ಗಂಡಸರು ಅವರು ಮಾಡುವಂತಹ ಕೆಲಸ ಮಾಡಿದರೆ ಶೋಭೆ ತರುತ್ತೆ. ಮನೆಗೆಲಸ ಮಾಡುವುದು ತಪ್ಪು ಅಂತ ನನ್ನ ಮನೋಭಾವ ಕೂಡಾ ಇತ್ತು. ಆದರೆ ಲಿಂಗತ್ವದ ಮಾಹಿತಿ ಪಡೆದ ನಂತರ ಮೊದಲಿಗೆ ನಾನೇ ಬದಲಾವಣೆ ಆಗಿದ್ದು, ನನ್ನ ಗಂಡನಿಗೂ ಕೂಡಾ ನಾನು ಕೆಲಸ ಹೇಳಿದ್ದುಂಟು. ಇದು ಇಂದು ಬದಲಾವಣೆ ನನ್ನದಾಯಿತು ಅಂತ ಹೇಳಬಹುದು. ನಂತರ ಮಹಿಳಾ ಕಾನೂನು ತರಬೇತಿಯನ್ನು ಪಡೆದು ಮಹಿಳೆಯರ ಮೇಲೆ ಆಗುವಂತಹ ದೌರ್ಜನ್ಯಗಳನ್ನು ಸಂಪೂರ್ಣವಾಗಿ ಅರಿತುಕೊಂಡೆನು. ನಮ್ಮ ತಳಮಟ್ಟದಲ್ಲಿಯೂ ಕೂಡಾ ಬಹಳಷ್ಟು ಕಾರ್ಯಕ್ರಮಗಳನ್ನು ನಡೆಸಿದಾಗ ಬಹಳಷ್ಟು ಮಹಿಳೆಯರು ತಮ್ಮ ಮೇಲೆ ಆಗುವಂತಹ ದೌರ್ಜನ್ಯಗಳ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತಾರೆ. ಅದಕ್ಕೆ ಪ್ರತ್ಯುತ್ತರವಾಗಿ ಸ್ಥಳದಲ್ಲಿಯೇ ಬಗೆಹರಿಯುವಂತಹ ಕೇಸ್‌ಗಳನ್ನು ಆಪ್ತ ಸಮಾಲೋಚನೆಯ ಮೂಲಕ ಪರಿಹರಿಸಲಾಗಿದೆ. ಇನ್ನು ಕೆಲವು ಪ್ರಕರಣಗಳನ್ನು ಡಿಎಲ್‌ಎಸ್‌ಎ, ಟಿಎಲ್‌ಎಸ್‌ಎಗೆ ರೆಫರ್ ಮಾಡಲಾಗಿದೆ. ನನ್ನಲ್ಲಿ ಆದಂತ ಬದಲಾಣೆಗಳು ಯಾವುದೆಂದರೆ ನಾನು ಮತ್ತೊಬ್ಬರ ಸಮಸ್ಯೆಗೆ ಸ್ಪಂದಿಸಲು ಅನುಕೂಲವಾಯಿತು ಮತ್ತು ಕೆಲವೊಂದು ಪ್ರಕರಣಗಳನ್ನು 1098 ಮುಖಾಂತರ ಒಂದು ಮಗುವನ್ನು ಲೈಂಗಿಕ ದೌರ್ಜನ್ಯದಿಂದ ಪಾರು ಮಾಡಲಾಯಿತು. ಕಳೆದ ಡಿಸೆಂಬರ್ 4ನೇ ತಾರೀಖಿನಂದು ಒಂದು ಕಾಲ್ ಬಂತು. ನಾನು ಆ ವೇಳೆ ಮೈಸೂರಲ್ಲಿ ಒಂದು ತರಬೇತಿಗಾಗಿ ಹೋಗಿದ್ದೆನು. ನಮ್ಮ ಬಾಗಲಕೋಟೆ ತಾಲೂಕಿನ ಮುರಮಳ ಗ್ರಾಮದಲ್ಲಿ ಒಬ್ಬ ಮಹಿಳೆಯ ಮೇಲೆ ಕೌಟುಂಬಿಕ ದೌರ್ಜನ್ಯ ದೈಹಿಕ ದೌರ್ಜನ್ಯ ನಡೆಯುತ್ತಿದ್ದು ಮಹಿಳೆಯ ತಮ್ಮನು ನನಗೆ ಕಾಲ್ ಮಾಡಿದಾಗ ನಾನು ತಕ್ಷಣ 112ಗೆ ಕರೆಮಾಡಿ 10 ನಿಮಿಷದಲ್ಲಿ ಹೊಯ್ಸಳ ಗಾಡಿ ಹೋಗುವ ಹಾಗೆ ಮಾಡಿ ಆ ಮಹಿಳೆಯನ್ನು ಆ ವೇಳೆ ರಕ್ಷಣೆಯ ಕೆಲಸ ಮಾಡಿದ್ದುಂಟು. ಈ ರೀತಿ ಮಾಡಿದಾಗ ನನಗೆ ತುಂಬಾ ಖುಷಿಯಾಯಿತು. ಯಾಕೆಂದರೆ ನಾನು ಪಡೆದಂತ ಮಾಹಿತಿ ಬೇರೆಯವರಿಗೆ ತಿಳಿಸಿದ ಮಾಹಿತಿ ಎಷ್ಟು ಲಾಭದಾಯಕವಾಗಿದೆ ಅಂತಾ ಸಂತೋಷವಾಗುತ್ತೆ. ಇದಾದ ನಂತರ ದಾಖಲಾತಿಗಳ ನಿರ್ವಹಣೆ ಹೇಗೆ ಮಾಡಬೇಕು? ದಾಖಲಾತಿಗಳು ಎಷ್ಟು ನಮ್ಮ ಜೀವನದಲ್ಲಿ ಪ್ರಾಮುಖ್ಯತೆ ಕೊಡುತ್ತೆ ಅನ್ನೋದು ಮತ್ತೆ 3 ದಿನದ ತರಬೇತಿ ಪಡೆದಾಗ ಮಾಹಿತಿ ದೊರಕಿತು. ನಮ್ಮ ಕೇಸ್ ಗಟ್ಟಿಯಾದ ನಿಲುವು ಸ್ಥಾಪಿಸಬೇಕಾದರೆ ಸಾಕ್ಷ್ಯಾಧಾರಗಳು ಬಹು ಪ್ರಾಮುಖ್ಯತೆ ವಹಿಸುತ್ತದೆ ಅಂತಾ ತಿಳಿಯಿತು ಮತ್ತು ಮತ್ತೊಬ್ಬರಿಗೂ ತಿಳಿಸಲಾಯಿತು. ಈ ಮೂರು ತರಬೇತಿಯಿಂದ ನಮ್ಮ ಪಿಎಲ್‌ಎಫ್‌ಗಳಲ್ಲಿ ಕೆಲವೊಬ್ಬರ ಮನೆಗಳಲ್ಲಿ ಲಿಂಗ ಸಮಾನತೆ ಕಂಡುಬಂದಿದೆ. ನಮ್ಮ ಪಿಎಲ್‌ಎಫ್‌ಗಳು ಧೈರ್ಯದಿಂದ ಮಾತನಾಡುವವರು ಆಗಿದ್ದಾರೆ ಮತ್ತು ಅವರ ಭಾಗಾರ್ಥಿಗಳಲ್ಲಿ ಯಾರಿಗಾದರೂ ಕೌಟುಂಬಿಕ ದೌರ್ಜನ್ಯದ ಪ್ರಕರಣಗಳು ಬಂದರೆ ನನಗೂ ತಿಳಿಸುತ್ತಾರೆ. ಒಟ್ಟಿಗೆ ಆ ಪ್ರಕರಣದ ಬಗ್ಗೆ ವಿಚಾರಿಸಿ ಮುಂದಿನ ಕ್ರಮ ಜರುಗಿಸುತ್ತೇವೆ.

**ಬೀಬಿಜಾನ ಜೆ. ಗಲಗಲಿ** ಸುಗಮಕಾರರು, ಬಾಗಲಕೋಟೆ

---

ಈಗಾಗಲೇ ಸುಮಾರು 15 ವರ್ಷಗಳಿಂದ ಮಹಿಳೆಯರ ಬಗ್ಗೆ ಮಕ್ಕಳ ಬಗ್ಗೆ ಅಭಿವೃದ್ಧಿ ಕ್ಷೇತ್ರಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸಮಾಡಿದ್ದೇನೆ. ಕಳೆದ ಒಂದು ವರ್ಷದಿಂದ

ನಾನು ಡೀಡ್ಸ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ್ದೆ. ನೇರವಾಗಿ ಇಲಾಖೆಗಳ ಭೇಟಿ, ನ್ಯಾಯ ವ್ಯವಸ್ಥೆಯ ಬಗ್ಗೆ, ಮಹಿಳಾ ಕಾನೂನುಗಳ ಅರಿವನ್ನು ಮಾಡಿಸುವುದರ ಬಗ್ಗೆ, ನೊಂದ ಮಹಿಳೆಯರಿಗೆ ಸಾಂತ್ವನ ನೀಡುವುದು ಅವರ ಮೇಲಿನ ಹಿಂಸೆಗೆ ಸರಕಾರಿ ನ್ಯಾಯ ವ್ಯವಸ್ಥೆಗಳ ಬೆಂಬಲ ಕೊಡಿಸುವುದು ಈ ಸಂಸ್ಥೆಯಿಂದ ಮಹಿಳೆಯರಿಗಿರುವ ಇಲಾಖಾ ವ್ಯವಸ್ಥೆಗಳ ಸೌಲಭ್ಯಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೋಲಿಸ್ ಇಲಾಖೆಗಳ ಬಗ್ಗೆ ತಿಳಿದುಕೊಂಡೆ. ಮೊದಲು ಇಲಾಖೆಗಗಳ ಬಗ್ಗೆ ನನಗೆ ಪರಿಚಯ ಇರಲಿಲ್ಲ ಮತ್ತು ಯಾವ ರೀತಿಯಾಗಿ ಇಲಾಖೆಗಳಿಗೆ ಮತ್ತು ಅಧಿಕಾರಿಗಳಿಗೆ ಭೇಟಿ ಮಾಡುವುದು ತಿಳಿದಿರಲಿಲ್ಲ. ಈ ಸಂಸ್ಥೆಯಿಂದ ನನಗೆ ನೇರವಾಗಿ ಅಧಿಕಾರಿಗಳೊಂದಿಗೆ ಹೋಗಿ ನೊಂದ ಮಹಿಳೆಯರಿಗೆ ನ್ಯಾಯ ವ್ಯವಸ್ಥೆಯನ್ನು ಒದಗಿಸುವ ವಕೀಲರನ್ನು ಹುಡುಕಿ ಮಹಿಳೆಯರಿಗೆ ಸಖಿ ಸಂಸ್ಥೆಯರಿಗೆ ಮಹಿಳಾ ಮತ್ತು ಮಕ್ಕಳ ಇಲಾಖಾ ಪೋಲಿಸ್ ಇಲಾಖೆಗೆ ಹೋಗುವುದು, 112ಗೆ ಕರೆಮಾಡಿ ಧೈರ್ಯವಾಗಿ ಮಾತನಾಡುವಷ್ಟು ಬೆಳೆದಿದ್ದೇನೆ. ಹೆಣ್ಣು ಗಂಡು ಸಮಾನರು ಮತ್ತು ಕೌಟುಂಬಿಕ ಹಿಂಸೆಯಿಂದ ನೊಂದ ಮಹಿಳೆಯರಿಗೆ ಪೂರಕ ಕಾಯ್ದೆಗಳ ಬಗ್ಗೆ, ಕಾಯ್ದೆಯಡಿಯಲ್ಲಿ ಇರುವ ಪರಹಾರದ ಬಗ್ಗೆ ತಿಳಿದಿದ್ದೇನೆ. ನಾನು ಡೀಡ್ಸ್ ಸಂಸ್ಥೆಗೆ ಯಾವಾಗಲೂ ಚಿರಋಣಿಯಾಗಿರುತ್ತೇನೆ. ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಯುವ (ಪೋಕ್ಸೋ) ಕಾಯ್ದೆ ಬಗ್ಗೆ, ಮಹಿಳೆಯರಿಗೆ ಮಕ್ಕಳಿಗೆ ಇರುವ ಹಕ್ಕುಗಳು ಮತ್ತು ಕಾಯ್ದೆಗಳ ಬಗ್ಗೆ ಮಾಹಿತಿ ತಿಳಿದುಕೊಂಡಿರುವೆ. ಸಮುದಾಯದ ಜನರಿಗೆ ಮಾಹಿತಿಗಳನ್ನು ಮತ್ತು ಕರಪತ್ರಗಳನ್ನು ಮನ ಮುಟ್ಟುವಂತೆ ಎಲ್ಲಾ ಹಳ್ಳಿಗಳಿಗೆ ತಲುಪಿಸಿದ್ದೇವೆ. 112ಗೆ ಕರೆ ಮಾಡಿರುವುದು ಮತ್ತು ಸಖಿ ಸಹಾಯ ಪಡೆದಿರುವುದು ತುಂಬಾ ಖುಷಿಯಾಗಿದೆ. ಮನೆಯಲ್ಲಿ ಸಮುದಾಯದಲ್ಲಿ ಹೆಣ್ಣು ಗಂಡು ಸಮಾನರು ಎನ್ನುವ ಭಾವನೆ ಬಂದಿದೆ. ನನಗೆ ಈ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಡೀಡ್ಸ್ ಸಂಸ್ಥೆಗೆ ಯಾವಾಗಲೂ ನಾನು ಚಿರಋಣಿ.

**ಲಕ್ಷ್ಮೀದೇವಿ** ಸುಗಮಕಾರರು, ಬಳ್ಳಾರಿ

---

ಪೂರಕ ಕಾನೂನು ಸುಗಮಕಾರಳಾಗಿ ನಾನು ಮೂರು ಹಂತಗಳ ತರಬೇತಿಯನ್ನು ಹಂತ-ಹಂತವಾಗಿ ಪಡೆದುಕೊಂಡೆ. ಆಗ ತಾನೇ ಕೋವಿಡ್‌ನಿಂದ ಕೆಲಸ ಕಳೆದುಕೊಂಡ ನನಗೆ ಡೀಡ್ಸ್‌ನಿಂದ ಆಯೋಜಿಸಿದ ತರಬೇತಿಯು ನಾಲ್ಕು ಗೋಡೆಯಿಂದ ಹೊರಬರಲು ಸಹಾಯ ಮಾಡಿತು. ನಾನು ಈ ಮೊದಲು ಅರೆ ಕಾನೂನು ಮಾಹಿತಿಯಲ್ಲಿ ಕೆಲಸ ಮಾಡಿದೆ, ಆದರೆ ಡೀಡ್ಸ್ ಸಂಸ್ಥೆಯು ತಳಮಟ್ಟದಲ್ಲಿ ಸೇರಿದ ಮಹಿಳೆಯರಿಗೆ ತಲುಪಿ ಅವರ ಸಮಸ್ಯೆಯನ್ನು ಅರಿತುಕೊಳ್ಳುವ ರೀತಿಯನ್ನು ಬಹು ವಿವರವಾಗಿ ಮೂರು ಹಂತಗಳಲ್ಲಿ ತರಬೇತಿಯನ್ನು ನೀಡಿದರು. ಇದರಿಂದ ನನಗೆ ತಳಮಟ್ಟದಲ್ಲಿ ಇಳಿದು ಮಹಿಳೆಯರಿಗೆ ಕೌಟುಂಬಿಕ ದೌರ್ಜನ್ಯ, ಮಹಿಳಾ ಕಾನೂನು, ಲಿಂಗ ತಾರತಮ್ಯ, ಕೋರ್ಟ್‌ನಲ್ಲಿ ವ್ಯಾಜ್ಯ ದೌರ್ಜನ್ಯ ಮಾಡುವುದು ಹೇಗೆ? ಎಂಬ ಮಾಹಿತಿ ನೀಡುವುದು ಒಂದು ರೀತಿಯಲ್ಲಿ ಪುಣ್ಯದ ಕೆಲಸವೆನಿಸುತ್ತದೆ. ಪ್ರತಿಯೊಂದು ಮಹಿಳೆಗೆ ಬಂದಿಲ್ಲ. ಒಂದು ಸಮಸ್ಯೆ ಇರುವುದು ಕಂಡುಬಂದವು. ಆದರೆ ಮಹಿಳೆಗೆ ಹಂಚಿಕೊಳ್ಳಲು ವೇದಿಕೆ ಬೇಕು. ಅದು ಡೀಡ್ಸ್ ಸಾಧ್ಯಗೊಳಿಸಿದೆ.

ನಾನು ಆರು ಪ್ರಕರಣಗಳಲ್ಲಿ ಕಾನೂನು ಮಾಹಿತಿ ನೀಡಿ ಕಾರ್ಯನಿರ್ವಹಿಸಿದ್ದೇನೆ. ಈಗ ಅವರು ತಮ್ಮ ಕುಟುಂಬಗಳಲ್ಲಿ ಸಂತೋಷವಾಗಿದ್ದಾರೆ. ವೈಯಕ್ತಿಕವಾಗಿ ನಾನೂ ಬೆಳೆದುಕೊಂಡ ಇಲ್ಲಿನ ಬಿ ಮಾಹಿತಿಯಿಂದ. ಡೀಡ್ಸ್ ಸಂಸ್ಥೆಯ ಕೈಪಿಡಿಗಳು ಬಹು ಮಾಹಿತಿಯಿಂದ ಕೂಡಿವೆ. ನಾನು ಮಾಹಿತಿಯನ್ನು ಆಧರಿಸಿ 300 ಪೋಲಿಸರಿಗೆ ಮತ್ತು 200 ಮಹಿಳೆಯರಿಗೆ ಲಿಂಗ ಸಮಾನತೆ ಬಗ್ಗೆ ತರಬೇತಿ ನೀಡಿದ್ದೇನೆ. ಕೋರ್ಟ್‌ನಲ್ಲಿ ಅರೆಕಾಲಿಕ ಸ್ವಯಂ ಸೇವಕರಾಗಲು ಅವಕಾಶ ದೊರೆಯಿತು. ಸಲೀಸಾಗಿ DALSA ಹಾಗೂ ವಕೀಲರರೊಂದಿಗೆ ಬೆರೆಯುತ್ತಿದ್ದೇನೆ. ಕಾನೂನಿನ ವಿಷಯಲ್ಲಿ ಹೆಚ್ಚಿನ ವ್ಯಾಸಂಗ ಮಾಡುವ ಆಸೆ ಇನ್ನೂ ಹೆಚ್ಚಾಗಿದೆ. ಸಂಪನ್ಮೂಲ ವ್ಯಕ್ತಿಯಾಗಿ ಬೇರೆ-ಬೇರೆ ಜಿಲ್ಲೆಗೆ ಹೋಗಿ ತರಬೇತಿ ನೀಡಿರುತ್ತೇನೆ. ಒಟ್ಟಾರೆ ನಾನು ಡೀಡ್ಸ್ ಸಂಸ್ಥೆಯ ನಿರ್ದೇಶಕರಿಗೆ, ಸಿಬ್ಬಂದಿಗಳಿಗೆ ಹೃದಯ ಪೂರಕ ಧನ್ಯವಾದ ಅರ್ಪಿಸುತ್ತೇನೆ.

**ಸಂತಾನಿ ದಂಡಿನ** ಸುಗಮಕಾರರು ಧಾರವಾಡ

---

ಮಂಗಳೂರು ಡೀಡ್ಸ್ ಸಂಸ್ಥೆಯು ನಮ್ಮ ಕಾರವಾರದಲ್ಲಿ 14 ಮಹಿಳೆಯರಿಗೆ ತಳಮಟ್ಟದ ಹಂತದ ಮೂರು ತರಬೇತಿ ನೀಡಿರುತ್ತಿದೆ. ತರಬೇತಿ ಪ್ರಾರಂಭದಲ್ಲಿ ಮಹಿಳಾ ಕಾನೂನು, ಮಹಿಳಾ ಪ್ರಕರಣಗಳು ಕಷ್ಟ ಸಾಧ್ಯ ಎಂದು ತಿಳಿದಿದ್ದೆ. ಆದರೆ ಸರಳವಾದ ತರಬೇತಿಯ ಕೌಶಲ್ಯತೆಯಿಂದ ಡೀಡ್ಸ್ ಸಂಸ್ಥೆಯವರು ನಾವು ತಳಹಂತದ ಮಹಿಳೆಯರಿಗೆ ತರಬೇತಿ, ಸಂವಹನ, ಮಹಿಳೆಯರಿಗೆ ಆತ್ಮಸ್ಥೈರ್ಯ, ಮಾತುಗಾರಿಕೆ ನಡೆಸುವಲ್ಲಿ ಸಫಲವಾಗಿಸಿರುತ್ತದೆ. ತರಬೇತಿ ಪಡೆದವರು ಸಾಕಷ್ಟು ಕುಗ್ರಾಮದ ಮಹಿಳೆಯರಿದ್ದರೂ, ಅಂತಹವರೆಲ್ಲ ಈ ತರಬೇತಿಯ ರೀತಿ ಎಲ್ಲರಿಗೂ ಖುಷಿ ನೀಡಿದೆ. ತರಬೇತಿಯಲ್ಲಿ ನೀಡಿರುವ ಲಿಂಗತ್ವ, ಮಹಿಳಾ ಕಾನೂನು, ಮಹಿಳಾ ಪ್ರಕರಣಗಳು. ನಾವು ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಲು ಉತ್ತಮ ಮಟ್ಟದ ಕೊಡುಗೆ ಆಗಿದೆ. ಪುಸ್ತಕ, ಕರಪತ್ರ, ಕ್ಯಾಲೆಂಡರ್ ಸರಳ ರೀತಿಯಲ್ಲಿದ್ದು, ತುಂಬ ಸಹಕಾರಿಯಾಗಿದೆ. ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ತಳಹಂತದ 1,000 ಮಹಿಳೆಯರಿಗೆ ಲಿಂಗತ್ವ ಹಾಗೂ ಕೌಟುಂಬಿಕ ದೌರ್ಜನ್ಯ, ಪೋಕ್ಸೊ ಕುರಿತು ತರಬೇತಿ ನೀಡಿದ್ದೇನೆ. ಎನ್‌ಆರ್‌ಎಲ್‌ಎಂ ಮಹಿಳೆಯರಿಗೆ ತಮ್ಮ ತರಬೇತಿಯ ಸರಾಗವಾಗಿ ಮಾಹಿತಿ ನೀಡುವ ಸಂಪನ್ಮೂಲ ವ್ಯಕ್ತಿಯಾಗಿ ಬೆಳೆದಿದ್ದೇನೆ. ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ನೇಮಕವಾದ ಮೇಲೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿ ಕೌಟುಂಬಿಕ ದೌರ್ಜನ್ಯ ಪ್ರಕರಣ, ಅಂಗನವಾಡಿ ಕಾರ್ಯಕರ್ತೆಯರ ಕೆಲವೊಂದು ಸಮಸ್ಯೆಗಳಿಗೆ ಅರ್ಜಿಗಳನ್ನು ಬರೆದುಕೊಡುವಲ್ಲಿ ಕೆಲಸ ನಿರ್ವಹಿಸಿರುತ್ತೇವೆ. ತಳಮಟ್ಟದ ಮಹಿಳೆಯರು ಈ ತರಬೇತಿ ತಮಗೆ ಆಗಿಂದಾಗ್ಗೆ ಆಗಬೇಕು ಮತ್ತು ಎಲ್ಲಾ ಮಹಿಳೆಯರು ಇದರ ಜ್ಞಾನಾರ್ಜನೆ ಪಡಯಬೇಕೆಂದು ತಿಳಿಸಿರುತ್ತಾರೆ. ಪೋಕ್ಸೊದ ಕುರಿತು ಶಾಲಾ ಮಕ್ಕಳಿಗೆ ಜ್ಞಾನಾರ್ಜನೆ ನೀಡಿದ್ದು, ನಾವು ತರಬೇತಿ ನೀಡಿದ ಸ್ಥಳಗಳಲ್ಲಿ ಮಹಿಳೆಯರು ಮಕ್ಕಳು ಜಾಗೃತರಾಗಿರುವುದು ತಿಳಿದು ಬಂದಿದೆ. ಒಟ್ಟಾರೆಯಾಗಿ ಹೇಳುವುದಾದರೆ ಕಾರವಾರದ ಸಮುಚ್ಚಯದೊಂದಿಗೆ ಮಂಗಳೂರಿನ ಡೀಡ್ಸ್ ಸಂಸ್ಥೆ ನೀಡಿರುವ ತರಬೇತಿ ಉತ್ತಮ ಮಾರ್ಗದರ್ಶನ ಸರಳತೆಯಿಂದ ಕೂಡಿದ್ದ ಸಂಘಟನೆಗೆ ನಾಂದಿಯಾಗಿದೆ.

**ಹೇಮಲತಾ** ಸುಗಮಕಾರರು, ಕಾರವಾರ ಉತ್ತರಕನ್ನಡ

ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : **ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್)**

ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037

E-mail : deeds82@rediffmail.com Website : www.deedsmangaluru.com